# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038



HAMPI TIMES
No.1 Leading Local News Paper
85,000
E-PAPER READERS
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201





ಸಂಪುಟ:02 • ಸಂಚಿಕೆ: 64 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 03.09.2024 • ,ಮಂಗಳವಾರ • ಪುಟ:04 • ಬೆಲೆ:2

Volume:02 • Issue: 64 • PRGI No:KARKAN/2023/88055 • VIJAYANAGARA • 03.09.2024 • Tuesday • Page:04 • Rs:2



HAMPI TIMES VIJAYANAGARA

HAPPY TEACHERS DAY

ಶಿಕ್ಷಕರೊಂದಿಗೆ ಭಾವಚಿತ್ರ

SPECIAL OFFER

ಪ್ರತಿ ಫೋಟೋಕ್ಕೆ ಕೇವಲ ರೂ.150/-

PhonePe M: 94486 33038

ಮುಂಚಿತವಾಗಿ ಬುಕ್ ಮಾಡಿ, ಅವಕಾಶ ನಿಮ್ಮದಾಗಿಸಿಕೊಳ್ಳಿ!

ನಿಮ್ಮ ನೆಚ್ಚಿನ ಶಿಕ್ಷಕರೊಂದಿಗಿನ ಭಾವಚಿತ್ರ ಇದೆಯಾ ?
ಹಾಗಿದ್ದಲ್ಲಿ ಹಂಪಿ ಟೈಮ್ಸ್‌ಗೆ ಕಳಿಸಿಕೊಡಿ
ಸೆ.5 ಶಿಕ್ಷಕರ ದಿನಾಚರಣೆಯಂದು
ಪೋಟೊಗಳು ಪ್ರಕಟಗೊಳ್ಳಲಿವೆ



e-mail: hampitimes@gmail.com

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ


## ಮೈಕ್ರೋ ನ್ಯೂಸ್

### ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಸಾಧಕರಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
2024–25ನೇ ಸಾಲಿನಲ್ಲಿ ರಾಜ್ಯಮಟ್ಟದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯಂದು ಪರಿಶಿಷ್ಟ ವರ್ಗದ (ಎಸ್‌ಟಿ) ಜನಾಂಗದ ಏಳಿಗೆಗಾಗಿ ಶ್ರಮಿಸಿದ ವ್ಯಕ್ತಿಗಳಿಗೆ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ನೀಡಿ ಗೌರವಿಸಲು ಸರ್ಕಾರ ನಿರ್ಧರಿಸಿದ್ದು, ಅರ್ಹ ಎಸ್.ಟಿ ಸಮಾಜದ ಸಾಧಕ ವ್ಯಕ್ತಿಗಳನ್ನು ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಸಾಧಕರು ಸೆಪ್ಟೆಂಬರ್ 17ರ ಒಳಗಾಗಿ ಆಯಾ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಗಳಿಗೆ ಅರ್ಜಿ ಸಲ್ಲಿಸಬಹುದು.

ದಾಖಲಾತಿಗಳು: ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಮತ್ತು 2 ಭಾವ ಚಿತ್ರಗಳು, ತುಂಬಿದ ಅರ್ಜಿ ನಮೂನೆ, ಸಾಮಾಜಿಕ, ಆರ್ಥಿಕ, ಸಾಹಿತ್ಯಿಕ ಮತ್ತು ಇತರೆ ಸಾಧನೆಯ ದಾಖಲೆಗಳು, ಭಾವಚಿತ್ರಗಳು ಸಲ್ಲಿಸಬೇಕು.

ನಿಯಮ: ಸಾಧಕರ ವಯಸ್ಸು ಕನಿಷ್ಠ 35 ವರ್ಷಗಳಾಗಿರಬೇಕು., ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಯ ಪುರಸ್ಕೃತರನ್ನು ಮರಣೋತ್ತರವಾಗಿ ಆಯ್ಕೆ ಮಾಡುವುದಿಲ್ಲ., ಅಪಾರಾದ ಹಿನ್ನೆಲೆ ಇದ್ದವರನ್ನ ಪರಿಗಣಿಸುವುದಿಲ್ಲ., ಒಬ್ಬ ವ್ಯಕ್ತಿಯನ್ನು ಜೀವಿತಾವಧಿಯಲ್ಲಿ ಒಂದೇ ಸಾರಿ ಆಯ್ಕೆ ಮಾಡಲಾಗುವುದು., ಪ್ರಶಸ್ತಿಯ ಬಹುಮಾನ 5 ಲಕ್ಷ, 20 ಗ್ರಾಮ್ ಚಿನ್ನದ ಪದಕ, ಪ್ರಶಂಸ ಪತ್ರ, ಶಾಲು, ಫಲಪುಷ್ಪ ಮತ್ತು ಗಂಧದಹಾರ ಒಳಗೊಂಡಿರುತ್ತದೆ ಎಂದು ಪರಿಶಿಷ್ಟ ವರ್ಗಗಳ

### ನಾಗಪುರದ ದೀಕ್ಷಾಭೂಮಿಗೆ ಭೇಟಿ ನೀಡುವ ಯಾತ್ರಾರ್ಥಿಗಳಿಗೆ ಬಸ್ ಸೌಕರ್ಯ


**ಹಂಪಿ ಟೈಮ್ಸ್ ಹೊಸಪೇಟೆ**
2024–25ನೇ ಸಾಲಿನಲ್ಲಿ ಮಹಾರಾಷ್ಟ್ರದ ನಾಗಪುರದಲ್ಲಿನ ದೀಕ್ಷಾ ಭೂಮಿಗೆ ಭೇಟಿ ನೀಡುವ ಯಾತ್ರಾರ್ಥಿಗಳಿಗಾಗಿ ಬಸ್‌ಗಳ ವ್ಯವಸ್ಥೆಯನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಕಲ್ಪಿಸಲಾಗುತ್ತಿದೆ. ದೀಕ್ಷಾ ಭೂಮಿಗೆ ಭೇಟಿ ನೀಡುವ ಯಾತ್ರಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ https://swdservices.karnataka.gov.in ನಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ಸೆಪ್ಟೆಂಬರ್ 5ರ ವರೆಗೆ ಸಲ್ಲಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಹೆಚ್.ವಿ. ತಿಳಿಸಿದ್ದಾರೆ.

## ಗ್ರಾಪಂ ಆಡಳಿತದಲ್ಲಿ ಹಸ್ತಕ್ಷೇಪ ನಿಲ್ಲಿಸಿ

### ಜಿಲ್ಲಾ ಗ್ರಾಪಂ ಸದಸ್ಯರ ಒಕ್ಕೂಟ ಆಗ್ರಹ | ವಿವಿಧ ಬೇಡಿಕೆ ಈಡೇರಿಸಲು ಒತ್ತಾಯ

**ಹಂಪಿ ಟೈಮ್ಸ್ ಹೊಸಪೇಟೆ**
ಗ್ರಾ.ಪಂಚಾಯಿತಿಗಳನ್ನು ಸ್ಥಳೀಯ ಸರ್ಕಾರಗಳನ್ನಾಗಿ ಕೆಲಸ ನಿರ್ವಹಿಸಲು ಬಿಡದೆ ರಾಜ್ಯ ಸರ್ಕಾರ ನೇರವಾಗಿ ಹಸ್ತಕ್ಷೇಪ ಮಾಡುತ್ತಿದೆ. ರಾಜ್ಯ ಸರ್ಕಾರ ರೂಪಿಸಿರುವ ಎಲ್ಲಾ ಯೋಜನೆಗಳಿಗೆ ಅವಶ್ಯ ಅನುದಾನವನ್ನು ಒದಗಿಸಬೇಕು ಹಾಗೂ ಗ್ರಾಮ ಪಂಚಾಯತಿಗಳ ಆಡಳಿತದಲ್ಲಿ ರಾಜ್ಯ ಸರ್ಕಾರ ಹಸ್ತಕ್ಷೇಪ ಮಾಡುವುದನ್ನು ತಕ್ಷಣ ನಿಲ್ಲಿಸಬೇಕೆಂದು ಜಿಲ್ಲಾ ಗ್ರಾಮಪಂಚಾಯತಿ ಸದಸ್ಯರ ಒಕ್ಕೂಟ ಆಗ್ರಹಿಸಿತು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಗ್ರಾಪಂ ಸದಸ್ಯರು ಸರ್ಕಾರದ ನಡೆ ವಿರೋಧಿಸಿ ಸೋಮವಾರ ಪ್ರತಿಭಟನೆ ನಡೆಸಿತು. ಜಿಲ್ಲಾಧ್ಯಕ್ಷ ಸಣ್ಣಕ್ಕಿ ಲಕ್ಷ್ಮಣ್ ಮಾತನಾಡಿ, ಘನ ತ್ಯಾಜ್ಯ ವಿಲೇವಾರಿ ಘಟಕ ನಿರ್ವಹಣೆ ಮತ್ತು ಕೂಸಿನ ಮನೆ, ಗ್ರಂಥಾಲಯ ಹಾಗೂ ಇನ್ನಿತರೆ >>4




## ಪ್ರಬಂಧ ಬರೆದು ಬಹುಮಾನ ಗೆಲ್ಲಿ


### ವಾರ್ತಾ ಇಲಾಖೆಯಿಂದ ಜಿಲ್ಲಾ, ರಾಜ್ಯಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆ
### ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ ಹೇಳಿಕೆ | ಸೆ.6 ಕೊನೆದಿನ

**ಹಂಪಿ ಟೈಮ್ಸ್ ಹೊಸಪೇಟೆ**
ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 155ನೇ ಜಯಂತಿಯ ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿ ಹಾಗೂ ಯುವಜನರಲ್ಲಿ ಮಹಾತ್ಮ ಗಾಂಧೀಜಿಯವರ ಬದುಕು, ಸ್ವಾತಂತ್ರ್ಯ ಚಳುವಳಿ, ಸರಳತೆ, ಅಹಿಂಸಾ ಮಾರ್ಗ, ಅಸ್ಪೃಶ್ಯತೆ ನಿವಾರಣೆಗಾಗಿ ನಡೆಸಿದ ಪ್ರಯೋಗಗಳು ಇತ್ಯಾದಿ ವಿಚಾರಗಳ ಬಗ್ಗೆ ಅರಿವು ಮೂಡಿಸಲು ವಿವಿಧ ವಿಷಯಗಳ ಕುರಿತು ವಿಜಯನಗರ ಜಿಲ್ಲೆಯ ಪ್ರೌಢಶಾಲೆ, ಪದವಿ ಪೂರ್ವ ಶಿಕ್ಷಣ ಹಾಗೂ ಪದವಿ–ಸ್ನಾತಕೋತ್ತರ ಪದವಿಗಳ ಹಂತದ ವಿದ್ಯಾರ್ಥಿಗಳಿಗೆ ಒಟ್ಟು 3 ವಿಭಾಗಗಳಲ್ಲಿ ಬಾಪೂಜಿ ಪ್ರಬಂಧ ಸ್ಪರ್ಧೆಯನ್ನು ಜಿಲ್ಲಾ ಹಾಗೂ ರಾಜ್ಯಮಟ್ಟದಲ್ಲಿ ವಿಜಯನಗರ ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಆಯೋಜಿಸಲು ಉದ್ದೇಶಿಸಲಾಗಿದೆ.

ಜಿಲ್ಲಾಮಟ್ಟದಲ್ಲಿ ಪ್ರಥಮ ಬಹುಮಾನ ವಿಜೇತ ಪ್ರಬಂಧಗಳನ್ನು ರಾಜ್ಯಮಟ್ಟದಲ್ಲಿ ಮರುಮೌಲ್ಯಮಾಪನ ಮಾಡಿ ರಾಜ್ಯಮಟ್ಟದ ಫಲಿತಾಂಶ ಘೋಷಿಸಲಾಗುವುದು. ಪ್ರತಿ ವಿಭಾಗದಲ್ಲಿನ ಅತ್ಯುತ್ತಮವಾದ ಮೂರು (3) ಪ್ರಬಂಧಗಳಿಗೆ ಅಕ್ಟೋಬರ್ 02 ರಂದು ಜಿಲ್ಲಾ ಮಟ್ಟದ ಗಾಂಧೀ ಜಯಂತಿ ದಿನಾಚರಣೆ ಸಂದರ್ಭದಲ್ಲಿ ಬಹುಮಾನ ನೀಡಿ ಪ್ರಬಂಧ ರಚನೆಕಾರರಿಗೆ ಗೌರವಿಸಲಾಗುವುದು.

**ನಿಬಂಧನೆಗಳು:–** ಪ್ರಬಂಧವು ಸಂಪೂರ್ಣವಾಗಿ ಸ್ವರಚಿತವಾಗಿರಬೇಕು. ಸ್ಪರ್ಧೆ ಏರ್ಪಡಿಸುವ ಸ್ಥಳದಲ್ಲಿಯೇ ಶುದ್ಧ ಕೈಬರಹದಲ್ಲಿ ಪ್ರಬಂಧ ಬರೆಯಬೇಕು. ಆಕರವಾಗಿ ಬಳಸಿದ ಪರಾಮರ್ಶನ / ಆಧಾರ ಗ್ರಂಥಗಳ ವಿವರಗಳನ್ನು ಪ್ರಬಂಧದ ಕೊನೆಯಲ್ಲಿ ನಮೂದಿಸಬೇಕು. ಆದರೆ, ಸ್ಪರ್ಧೆ ಏರ್ಪಡಿಸುವ ಸ್ಥಳದಲ್ಲಿ ಪರಾಮರ್ಶನ / ಆಧಾರ ಗ್ರಂಥಗಳು / ಮೊಬೈಲ್ ಗಳ ಬಳಕೆಗೆ ಅವಕಾಶವಿರುವುದಿಲ್ಲ. ಪ್ರಬಂಧಕಾರರ ಹೆಸರು, ವಿಳಾಸ ನಮೂದಿಸಿರಬೇಕು. ಪ್ರಬಂಧವು ಈ ಮೊದಲು ಎಲ್ಲಿಯೂ ಪ್ರಕಟವಾಗಿರಬಾರದು. ಪ್ರಬಂಧ ಸಲ್ಲಿಸಲು ಸೆಪ್ಟೆಂಬರ್ 6 ಕೊನೆಯ ದಿನವಾಗಿರುತ್ತದೆ. ಆಯ್ದ ಪ್ರಬಂಧಗಳ ಪ್ರಕಟಣೆಯ ಹಕ್ಕನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹೊಂದಿರುತ್ತದೆ ಎಂದು ವಿಜಯನಗರ ಜಿಲ್ಲೆಯ ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ: 9916111356 ಅಥವಾ 9008462236ಗೆ ಸಂಪರ್ಕಿಸಬಹುದಾಗಿದೆ.

**ಪ್ರೌಢ ಶಾಲಾ ವಿಭಾಗದ ವಿಷಯ:** 1) ಮಹಾತ್ಮ ಗಾಂಧೀಜಿ ಹಾಗೂ ಪ್ರಜಾಪ್ರಭುತ್ವ, 2) ಗಾಂಧೀಜಿಯವರ ವಿಚಾರದಲ್ಲಿ ಸತ್ಯಾಗ್ರಹ, 3) ನನ್ನ ಬದುಕಿನಲ್ಲಿ ಗಾಂಧೀಜಿ ತತ್ವಗಳನ್ನು ಅಳವಡಿಸಿಕೊಳ್ಳುವ ಬಗೆ, 4) ಗಾಂಧೀಜಿಯವರ ತತ್ವಗಳಿಂದ ದೇಶ ಕಟ್ಟುವ ಬಗೆ, ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳು >> 4



**ವಿಜೇತರಿಗೆ ರಾಜ್ಯಮಟ್ಟದಲ್ಲಿ ಪ್ರತಿ ವಿಭಾಗದಲ್ಲಿ ಪ್ರಥಮ 31 ಸಾವಿರ ರೂ. ದ್ವಿತೀಯ 21 ಸಾವಿರ ರೂ. ಮತ್ತು ತೃತೀಯ 11 ಸಾವಿರ ರೂ. ಹಾಗೂ ಜಿಲ್ಲಾಮಟ್ಟದಲ್ಲಿ ಪ್ರತಿ ವಿಭಾಗದಲ್ಲಿ ಪ್ರಥಮ 3 ಸಾವಿರ ರೂ. ದ್ವಿತೀಯ 2 ಸಾವಿರ ರೂ ಮತ್ತು ತೃತೀಯ 1 ಸಾವಿರ ರೂ. ಬಹುಮಾನ ನೀಡಲಾಗುವುದು.**

## ಗ್ರಾಮಗಳಲ್ಲೇ ಪೋತಿ ಹಕ್ಕು ಬದಲಾವಣೆ ಮಾಡಿಕೊಳ್ಳಿ

### ಪ್ರತಿ ಸೋಮವಾರ, ಮಂಗಳವಾರ ಆಂದೋಲನ

**ಹಂಪಿ ಟೈಮ್ಸ್ ಹೊಸಪೇಟೆ**
ವಿಜಯನಗರ ಜಿಲ್ಲೆಯ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಹೊಸಪೇಟೆ ತಾಲ್ಲೂಕಿನಲ್ಲಿ ಪ್ರತಿ ಸೋಮವಾರ ಮತ್ತು ಮಂಗಳವಾರ ಪೋತಿ, ವಾರಸು ಖಾತೆ ಆಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಸಾರ್ವಜನಿಕರು ಪೋತಿ, ವಾರಸು ಹಕ್ಕು ಬದಲಾವಣೆಗೆ ತಮ್ಮ ತಮ್ಮ ಗ್ರಾಮಗಳಲ್ಲಿ ಸಂಬಂಧಿಸಿದ ಗ್ರಾಮ ಆಡಳಿತ ಅಧಿಕಾರಿಗಳಿಗೆ ನೇರವಾಗಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ಸಲ್ಲಿಸಿ, ಭೂಮಿ ತಂತ್ರಾಂಶದಲ್ಲಿ ನಮೂನೆ–1 ರಂತೆ ಪೌತಿ/ವಾರಸು ಖಾತೆ ಬದಲಾವಣೆ ಮಾಡಿಕೊಳ್ಳಬಹುದಾಗಿದೆ. ಹೊಸಪೇಟೆ ತಾಲೂಕಿನ ಸಾರ್ವಜನಿಕರು ಈ ಸೌಲಭ್ಯದ ಸದುಪಯೋಗಪಡಿಸಿಕೊಳ್ಳಬಹುದು ಎಂದು ಹೊಸಪೇಟೆ ತಹಸೀಲ್ದಾರರು ತಿಳಿಸಿದ್ದಾರೆ.

ಪೌತಿ/ವಾರಸು ಖಾತೆ ಬದಲಾವಣೆಗೆ ಸಲ್ಲಿಸಬೇಕಾದ ಅಗತ್ಯ ದೃಢೀಕೃತ ದಾಖಲೆಗಳು: ಪಹಣಿಯಲ್ಲಿ ದಾಖಲಿರುವ ಮೃತ ಖಾತೆದಾರರ ಮರಣ ಪ್ರಮಾಣ ಪತ್ರ, ಮರಣ ಪ್ರಮಾಣ ಪತ್ರ ಲಭ್ಯವಿಲ್ಲದಿದ್ದಲ್ಲಿ ಕಡ್ಡಾಯವಾಗಿ ಅಫಿಡವಿಟ್ ಸಲ್ಲಿಸುವುದು. ತಹಶೀಲ್ದಾರ್ ಕಚೇರಿಯಿಂದ ಪಡೆದುಕೊಂಡ ಗಣಕೀಕೃತ ವಂಶವೃಕ್ಷ ಮತ್ತು ವಂಶವೃಕ್ಷದ ಅಫಿಡವಿಟ್. ವಾರಸುದಾರರ ಎಲ್ಲಾ ಸದಸ್ಯರ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ಜೆರಾಕ್ಸ್ ಪ್ರತಿ. 1967–68 ರಿಂದ 1999–2000 ರವರೆಗಿನ ಕೈಬರಹ ಪಹಣಿ ಮತ್ತು 2001–2002 ರಿಂದ ಚಾಲ್ತಿವರೆಗಿನ ಗಣಕೀಕೃತ ಪಹಣಿಗಳು. ಮೃತ ಖಾತೆದಾರರಿಗೆ ಜಮೀನು ಹಕ್ಕು ಪ್ರಾಪ್ತವಾದ ಬಗ್ಗೆ ಕಂದಾಯ ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ ಎಂದು ಹೊಸಪೇಟೆಯ ತಹಶೀಲ್ದಾರರು ತಿಳಿಸಿದ್ದಾರೆ.

## ವಿದ್ಯುತ್ ಅವಘಡ ಪ್ರಾಣಹಾನಿ ತಪ್ಪಿಸಿ

### ಶಾಸಕ ಜೆ.ಎನ್.ಗಣೇಶ್ ಮನವಿ
### ಜೆಸ್ಕಾಂ ಸಹಾಯವಾಣಿ ಸಂಖ್ಯೆ 1912 / 9769368959




**ಹಂಪಿ ಟೈಮ್ಸ್ ಬಳ್ಳಾರಿ**
ವಿದ್ಯುತ್ ಸಮಸ್ಯೆಯಾದಾಗ ರೈತರು ತಾಳ್ಮೆ ವಹಿಸಿದರೆ ವಿದ್ಯುತ್‌ನಿಂದ ಸಂಭವಿಸಬಹುದಾದ ಅವಘಡಗಳನ್ನು ತಪ್ಪಿಸಬಹುದು ಎಂದು ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ಶಾಸಕ ಜೆ.ಎನ್.ಗಣೇಶ್ ಅವರು ಹೇಳಿದರು.

ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ) ಕುರುಗೋಡು ಉಪವಿಭಾಗ ವತಿಯಿಂದ ಕುರುಗೋಡು ಪಟ್ಟಣದ ದೊಡ್ಡಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಸೋಮವಾರ ಏರ್ಪಡಿಸಿದ್ದ ವಿದ್ಯುತ್ ಸುರಕ್ಷತಾ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು ರೈತರು ಹಾಗೂ ಸಾರ್ವಜನಿಕರು ಯಾವುದೇ ರೀತಿ ವಿದ್ಯುತ್ ಸಂಬಂಧಿತ ಸಮಸ್ಯೆಗಳು ಕಂಡುಬಂದಲ್ಲಿ ಜೆಸ್ಕಾಂ ಅಧಿಕಾರಿಗಳಿಗೆ ಮಾಹಿತಿ ತಿಳಿಸಬೇಕು. ಅವಸರದ ಅವಘಡದಿಂದ ಪ್ರಾಣಹಾನಿಯಾಗುವ ಸಂಭವವಿರುತ್ತದೆ. ವಿದ್ಯುತ್ ಸಂಬಂಧಿ ಸಮಸ್ಯೆಗಳ ಪರಿಹಾರಕ್ಕಾಗಿ ಜೆಸ್ಕಾಂ ವತಿಯಿಂದ ದಿನದ 24 ಗಂಟೆ ಕಾರ್ಯನಿರ್ವಹಿಸುವ ಸಹಾಯವಾಣಿ ಸೇರಿದಂತೆ ವಾಟ್ಸಾಪ್ ಮತ್ತಿತರೆ ತುರ್ತು ಸಂಪರ್ಕ ಸಂಖ್ಯೆಗಳಿಗೆ ಕರೆಮಾಡಬೇಕು.

ವಿದ್ಯುತ್ ಸಂಬಂಧಿತ ಯಾವುದೇ ಸಮಸ್ಯೆಗಳಿಗೆ 24*7 ಜೆಸ್ಕಾಂ ಸಹಾಯವಾಣಿ ಸಂಖ್ಯೆ 1912 ಮತ್ತು ಸಹಾಯವಾಣಿ ಸಂಖ್ಯೆ 9769368959 ಕ್ಕೆ ಎಸ್‌ಎಮ್‌ಎಸ್ ಮಾಡಬಹುದು ಅಥವಾ ವಾಟ್ಸ್‌ಆಪ್ ಸಹಾಯವಾಣಿ ಸಂಖ್ಯೆ 9480847593 ಕ್ಕೆ ಫೋಟೋ ಮತ್ತು ವಿಡೀಯೊ ಮೂಲಕ ದೂರು ನೀಡಿದರೆ ಜೆಸ್ಕಾಂ ಅಧಿಕಾರಿಗಳು ಸಮಸ್ಯೆಗೆ ಪರಿಹಾರ ಕಲ್ಪಿಸುತ್ತಾರೆ. ಯಾವುದೇ ಸಮಸ್ಯೆ ಕಂಡುಬಂದರೂ ಜೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರೆ ಅವರು ಸಮಸ್ಯೆ ಬಗೆಹರಿಸುತ್ತಾರೆ. ಇದರಿಂದ ನೀವು ಸುರಕ್ಷಿತವಾಗಿರುವುದರ ಜತೆಗೆ ನಿಮ್ಮ ಸುತ್ತ ಇರುವವರನ್ನೂ ಸುರಕ್ಷಿತವಾಗಿರಿಸಬೇಕು ಎಂದು ಹೇಳಿದರು.

ವಿದ್ಯುತ್ ಸರಕ್ಷತಾ ಕ್ರಮಗಳ ಕುರಿತು ಜೆಸ್ಕಾಂ ಸಿಬ್ಬಂದಿ ನಾಟಕ ಪ್ರದರ್ಶನದ ಮೂಲಕ ಮಾಹಿತಿ ನೀಡಿದರು. ಜತೆಗೆ ವಿದ್ಯುತ್ ಸುರಕ್ಷತಾ ಮುಂಜಾಗ್ರತ ಕ್ರಮಗಳ ಸೂಚನಾ ಫಲಕಗಳ ಪ್ರದರ್ಶಿಸುವ ಮೂಲಕ ಜಾಗೃತಿ ಮೂಡಿಸಲಾಯಿತು. ಈ ಸಂದರ್ಭದಲ್ಲಿ ಕುರುಗೋಡು ಜೆಸ್ಕಾಂ ವಿಭಾಗದ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

## ರಾಜಶೇಖರ ನೀರಮಾನ್ವಿಯವರ ಕಥೆಗಳು ಶಾಶ್ವತ

### ಕನ್ನಡ ವಿವಿಯಲ್ಲಿ ಡಾ. ರಾಜಶೇಖರ ನೀರಮಾನ್ವಿ ಅವರ ಸ್ಮರಣಾರ್ಥ ಸಂವಾದ

**ಹಂಪಿ ಟೈಮ್ಸ್ ಹೊಸಪೇಟೆ**
ಕನ್ನಡ ಸಾಹಿತ್ಯ ಲೋಕದಲ್ಲಿ ರಾಜಶೇಖರ ನೀರಮಾನ್ವಿ ಅವರ ದಟ್ಟ ಅನುಭವಗಳು ಗಟ್ಟಿ ಕಥೆಗಳ ರೂಪದಲ್ಲಿ ಶಾಶ್ವತ ಸ್ಥಾನ ಪಡೆದಿವೆ. 'ಭೂಮಿಯಲ್ಲಿ ಇಡಿಯಷ್ಟು ಬೀಜ ಹಾಕಿ ರಾಶಿಯಷ್ಟು ಪ್ರತಿಫಲ' ಪಡೆದಿದ್ದು ಬಹಳ ಕಡಿಮೆ ಎಂದು ಸಂಶೋಧನಾ ವಿದ್ಯಾರ್ಥಿ ರವಿಕುಮಾರ್ ಅಭಿಪ್ರಾಯಪಟ್ಟರು.

ಕನ್ನಡ ವಿವಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಿಂದ ಪಂಪ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಡಾ. ರಾಜಶೇಖರ ನೀರಮಾನ್ವಿ ಅವರ ಸ್ಮರಣಾರ್ಥ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು. ಹಂಗಿನರಮನೆಯ ಹೊರಗೆ ಮತ್ತು ಕರ್ಪೂರದ ಕಾಯದಲ್ಲಿ ಎಂಬ ಕಥಾ ಸಂಕಲನಗಳು ವಿಶೇಷವಾಗಿವೆ. ರಾಜಶೇಖರ




ನೀರಮಾನ್ವಿ ಅವರ ಮೊದಲ ಕಥೆಗಳು ವೃತ್ತ, ಭೂತ ಮತ್ತು ಹಂಗಿನರಮನೆಯ ಹೊರಗೆ ಪತ್ರಿಕೆಗಳ ಮೂಲಕ ಮೆಚ್ಚುಗೆ ಪಡೆದಿವೆ. ಗಂಡು ಮತ್ತು ಹೆಣ್ಣು ಮಾತ್ರ ಜಾತಿಗಳು ಇದರ ಹೊರತು ಯಾವ ಜಾತಿಯಿಲ್ಲ ಎಂದರು.

ಸಂಶೋಧನಾ ವಿದ್ಯಾರ್ಥಿ ಮಂಜುನಾಥ್ ಕೆ. ಮಾತನಾಡಿ, ರಾಜಶೇಖರ ನೀರಮಾನ್ವಿ ಅವರ ಕೃತಿಗಳು ದೇಶದ ಎಲ್ಲಾ ಭಾಷೆಗಳಲ್ಲಿ ಅನುವಾದವಾಗಿರುವುದು ವಿಶೇಷ. ಪುರೋಹಿತರನ್ನು ನಂಬಿ ನಾವು ಹೇಗೆ ಮೂರ್ಖರಾಗಿದ್ದೇವೆ ಎಂಬುದನ್ನು ಕಟ್ಟಿಕೊಡುತ್ತದೆ ಎಂದು ತಿಳಿಸಿದರು.


ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ. ವೆಂಕಟಗಿರಿ ದಳವಾಯಿ, ಡಾ.ಗೋವಿಂದ ಮತ್ತು ಸಂಶೋಧಕರಾದ ಇಸ್ಮಾಯಿಲ್ ಸಿದ್ದಿಕ್, ಮಂಜುನಾಥ್ ಕೆ, ದೇವಿಂದ್ರಪ್ಪ, ರವಿಚಂದ್ರ ಕೆ, ಅಕ್ಷತ ಟಿ, ಶಬ್ರಿನ್ ಬಾನು, ಗುರುರಾಜ್ ಎನ್, ಖಾಜಾಸಾಬ್, ಪ್ರವೀಣ್ ಕೆ, ವಿಷ್ಣು ಉಪಸ್ಥಿತರಿದ್ದರು.

# ವಿಜ್ಞಾನ

## ವೇಗವಾಗಿ ಚಲಿಸುವ ರೈಲಿನ ಬಳಿ ಏಕೆ ನಿಲ್ಲಬಾರದು?

■ ಆರ್.ಬಿ.ಗುರುಬಸವರಾಜ

ಶಿಲ್ಪ ಅಂಕಲ್‌ನ ಜೊತೆ ರೈಲ್ವೆ ಹಳಿ ದಾಟುತ್ತಿದ್ದಳು. ರೈಲ್ವೆ ಹಳಿಗೆ ಸಮೀಪ ಬರುತ್ತಿದ್ದಂತೆ ರೈಲಿನ ಹಾರನ್ ಸೌಂಡ್ ಕೇಳಿದ ಅಂಕಲ್ ಶಿಲ್ಪಳಿಗೆ ನಿಲ್ಲುವಂತೆ ಸೂಚಿಸಿದರು. “ಅಂಕಲ್ ರೈಲು ಇನ್ನೂ ತುಂಬಾ ದೂರ ಇದೆ. ನಾವು ಅಷ್ಟರೊಳಗೆ ಹಳಿ ದಾಟುತ್ತೇವೆ” ಎಂದಳು. ‘ಇಂತಹ ಹುಚ್ಚು ಸಾಹಸಗಳು ಬೇಡಮ್ಮ. ಈಗ ಬರುತ್ತಿರುವ ರೈಲು ತುಂಬಾ ವೇಗವಾಗಿ ಚಲಿಸುತ್ತದೆ. ಇಂತಹ ಸಂದರ್ಭಗಳಲ್ಲಿ ರೈಲಿನ ಬಳಿ ನಿಲ್ಲಬಾರದು’ ಎಂದರು ಅಂಕಲ್. “ಅಂಕಲ್ ವೇಗವಾಗಿ ಚಲಿಸುವ ರೈಲಿನ ಬಳಿ ಏಕೆ ನಿಲ್ಲಬಾರದು?” ಎಂದು ಮತ್ತೊಂದು ಪ್ರಶ್ನೆ ಕೇಳಿದಳು. ಅದಕ್ಕೆ ಅಂಕಲ್ ಉತ್ತರಿಸುತ್ತಿರುವ ವೇಳೆ ರೈಲು ವೇಗವಾಗಿ ಚಲಿಸುತ್ತಿತ್ತು.



ವೇಗವಾಗಿ ಚಲಿಸುವ ರೈಲುಗಳ ಬಳಿ ನಿಲ್ಲಬಾರದು. ಏಕೆಂದರೆ ಚಲಿಸುವ ರೈಲು ಅನೇಕ ಅಪಾಯಗಳನ್ನು ತಂದೊಡ್ಡಬಹುದು. ರೈಲುಗಳು ವೇಗವಾಗಿ ಚಲಿಸುವಾಗ ಶಕ್ತಿಯುತವಾದ ಗಾಳಿಯ ಬಲವನ್ನು ನಿರ್ಮಿಸುತ್ತದೆ. ಈ ಬಲವು ಅಕ್ಕಪಕ್ಕದಲ್ಲಿರುವ ಯಾರನ್ನಾದರೂ ಸಮತೋಲನದಿಂದ ಕೆಡವಬಹುದು. ಚಲಿಸುವ ರೈಲಿನ ಗಾಳಿಯ ಬಲವು ರೈಲಿನೆಡೆಗೆ ಸೆಳೆದುಕೊಳ್ಳಬಹುದು ಅಥವಾ ಹಳಿಗಳಿಂದ ಆಚೆ ನೂಕಬಹುದು. ಎರಡೂ ಸಂದರ್ಭಗಳಲ್ಲಿ ರೈಲಿನ ಬಳಿ ನಿಂತಿರುವವರಿಗೆ ತುಂಬಾ ಅಪಾಯಗಳು ಆಗುವ ಸಾಧ್ಯತೆಗಳಿವೆ. ಆದ್ದರಿಂದ ಚಲಿಸುವ ರೈಲಿನ ಬಳಿ ನಿಲ್ಲುವುದು ಅಪಾಯಕಾರಿ.

ರೈಲುಗಳು ತುಂಬಾ ದೊಡ್ಡದಾಗಿರುತ್ತವೆ ಮತ್ತು ಭಾರವಾಗಿರುತ್ತವೆ. ಚಲಿಸುವ ವೇಗದಲ್ಲಿ ಜನರನ್ನು ಅವುಗಳ ಕಡೆಗೆ ಸೆಳೆದುಕೊಂಡರೆ ಹಳಿಗಳ ಮಧ್ಯೆ ಸಿಕ್ಕಿಕೊಂಡು ಸಾವು ಸಂಭವಿಸುತ್ತದೆ ಇಲ್ಲವೇ ಪ್ರಾಣಾಂತಿಕ ಗಾಯಗಳಾಗುತ್ತವೆ. ಅಲ್ಲದೇ ಇತರೇ ವಾಹನಗಳಂತೆ ರೈಲುಗಳನ್ನು ತಕ್ಷಣವಾಗಿ ನಿಲ್ಲಿಸಲು ಕಷ್ಟವಾಗುತ್ತದೆ.

ಇದಲ್ಲದೆ ರೈಲುಗಳು ಜೋರಾದ ಶಬ್ದ ಮತ್ತು ಕಂಪನಗಳನ್ನು ಸೃಷ್ಟಿಸುತ್ತವೆ. ಇದು ತುಂಬಾ ಹತ್ತಿರದಲ್ಲಿ ನಿಂತಿರುವ ಯಾರಿಗಾದರೂ ದಿಗ್ಭ್ರಮೆಗೊಳಿಸಬಹುದು ಅಥವಾ ಹಾನಿಕಾರಕವಾಗಬಹುದು. ಶ್ರವಣ ದೋಷ ಅಥವಾ ಇತರ ಸಂವೇದನಾ ಸೂಕ್ಷ್ಮತೆ ಹೊಂದಿರುವ ಜನರು ಈ ಪರಿಣಾಮಗಳಿಗೆ ದುರ್ಬಲರಾಗಬಹುದು. ಆದ್ದರಿಂದ ವೇಗವಾಗಿ ಚಲಿಸುವ ರೈಲಿನ ಬಳಿ ನಿಲ್ಲಬಾರದು. ರೈಲಿಗೆ ತುಂಬಾ ಹತ್ತಿರದಲ್ಲಿ ನಿಲ್ಲುವುದು ಕಾನೂನುಬಾಹಿರ. ಇದು ದಂಡ ಅಥವಾ ಇತರ ಕಾನೂನು ಪರಿಣಾಮಗಳಿಗೆ ಕಾರಣವಾಗಬಹುದು.

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಅಂತರಾಷ್ಟ್ರೀಯ ಕುಸ್ತಿಪಟು ಸಾಕ್ಷಿ ಮಲ್ಲಿಕ್

ಭಾರತ ಕುಸ್ತಿ ಕ್ರೀಡೆಯಲ್ಲಿ ತನ್ನದೇ ಆದ ಛಾಪನ್ನು ವಿಶ್ವದಲ್ಲಿ ಮೂಡಿಸಿದ್ದು ಈ ಇಂದಿನಿಂದಲೂ ಸ್ಥಾನಮಾನಗಳನ್ನು ಗಳಿಸಿಕೊಂಡು ಬಂದಿದೆ.

ಪುರುಷರೊಂದಿಗೆ ಮಹಿಳೆಯರು ಸಹ ತಮ್ಮದೇ ಆದ ಸಾಮರ್ಥ್ಯವನ್ನು ತೋರಿಸುವುದರ ಮೂಲಕ ಹೆಸರು ಗಳಿಸಿದ್ದಾರೆ ಅದರಲ್ಲಿ ಸಾಕ್ಷಿ ಮಲ್ಲಿಕ್ ಕೂಡ ಒಬ್ಬರು.

ಇವರು 3/9/1992 ರಂದು ಹರಿಯಾಣ ರಾಜ್ಯದ ರೋಹ್ಟಕ್ ಜಿಲ್ಲೆಯ ಮೊಖ್ರಾ ಎಂಬ ಪುಟ್ಟ ಹಳ್ಳಿಯಲ್ಲಿ ಜನಿಸಿದ್ದಾರೆ. ಇವರ ತಂದೆ ಸುಬ್ಬೀರ್ ದೆಹಲಿ ಸಾರಿಗೆ ಸಂಸ್ಥೆಯ ಬಸ್ ಕಂಡಕ್ಟರ್. ತಾಯಿ ಸ್ಥಳೀಯ ಆರೋಗ್ಯ ಚಿಕಿತ್ಸಾಲಯದಲ್ಲಿ ಮೇಲ್ವಿಚಾರಕರಾದ ಸುದೇಶ್ ಮಲಿಕ್ ದಂಪತಿಗಳ ಮಗಳು.



ಇವರ ಅಜ್ಜ ಬದ್ಲು ರಾಮ್ ಕುಸ್ತಿಪಟು ಅವರಿಂದ ಪ್ರೇರಣೆಗೊಂಡು ಕುಸ್ತಿ ಕ್ರೀಡೆಯನ್ನು ಆಯ್ಕೆ ಮಾಡಿಕೊಂಡು ತರಬೇತಿ ಪಡೆಯಲು ಆರಂಭಿಸುತ್ತಾರೆ. ಮುಂದೆ ಛೋಟು ರಾಮ್ ಸ್ಟೇಡಿಯಂ ನಲ್ಲಿರುವ ಅಖಾಡಾದಲ್ಲಿ ಕೋಚ್ ಈಶ್ವರ್ ದಹಿಯಾ ಅವರ ಅಡಿಯಲ್ಲಿ 12 ನೇ ವಯಸ್ಸಿನಲ್ಲಿ ಕುಸ್ತಿಯಲ್ಲಿ ತರಬೇತಿಯನ್ನು ಪ್ರಾರಂಭಿಸಿದರು.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ಅಂತರರಾಷ್ಟ್ರೀಯ ರಂಗದಲ್ಲಿ ವೃತ್ತಿಪರ ಕುಸ್ತಿಪಟುವಾಗಿ ಮಲಿಕ್ ಅವರ ಮೊದಲ ಯಶಸ್ಸು 2010 ರಲ್ಲಿ ಜೂನಿಯರ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ 58 ಕೆಜಿ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಕಂಚಿನ ಪದಕವನ್ನು ಗೆದ್ದರು.

2014 ಡೇವ್ ಶುಲ್ಟ್ಜ ಇಂಟರ್ನ್ಯಾಷನಲ್ ಪಂದ್ಯದ 60 ಕೆಜಿ ವಿಭಾಗದಲ್ಲಿ ಚಿನ್ನವನ್ನು ಗೆದ್ದರು.

2014 ಡೇವ್ ಶುಲ್ಟ್ಜ ಇಂಟರ್ನ್ಯಾಷನಲ್ ಪಂದ್ಯದ 60 ಕೆಜಿ ವಿಭಾಗದಲ್ಲಿ ಚಿನ್ನದ ಪದಕವನ್ನು ಪಡೆಯುತ್ತಾರೆ.

2015(ಕತಾರ್‌ನ ದೋಹಾ) ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ,60 ಕೆಜಿ ವಿಭಾಗದಲ್ಲಿ ಕಂಚಿನ ಪದಕವನ್ನು ಪಡೆದರು.

2016 ರ ರಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿ ಕಂಚಿನ ಪದಕವನ್ನು ಗೆದ್ದರು ಮತ್ತು ಒಲಿಂಪಿಕ್ ಪದಕ ಗೆದ್ದ ಭಾರತದ ಮೊದಲ ಮಹಿಳಾ ಕುಸ್ತಿಪಟುವಾದರು.

ಸಾಕ್ಷಿ ಮಲಿಕ್ ಜನವರಿ 2017 ರಲ್ಲಿ ನಡೆದ ಪ್ರೊ ವ್ರೆಸ್ಲಿಂಗ್ ಲೀಗ್‌ನ ಎರಡನೇ ಆವೃತ್ತಿಯಲ್ಲಿ 'ಕಲರ್ಸ್ ಡೆಲ್ಲಿ ಸುಲ್ತಾನ್ಸ್' ಅನ್ನು ಪ್ರತಿನಿಧಿಸಿದರು.

2022 (ಟರ್ಕಿ) ಇಸ್ತಾನ್‌ಬುಲ್‌ನಲ್ಲಿ ನಡೆದ ಯಾಸರ್ ಡೋಗು ಟೂರ್ನಮೆಂಟ್‌ನಲ್ಲಿ ಸ್ಪರ್ಧಿಸಿ ಕಂಚಿನ ಪದಕವನ್ನು ಪಡೆದಿರುತ್ತಾರೆ.

2022 ಬರ್ಮಿಂಗ್ಹ್ಯಾಮ್ ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ.

ಮಲಿಕ್ ಪ್ರಸ್ತುತ ಭಾರತೀಯ ರೈಲ್ವೆಯ ದೆಹಲಿ ವಿಭಾಗದ ವಾಣಿಜ್ಯ ವಿಭಾಗದಲ್ಲಿ ಉತ್ತರ ರೈಲ್ವೆ ವಲಯದಲ್ಲಿ ಉದ್ಯೋಗಿಯಾಗಿದ್ದಾರೆ. ರಿಯೊದಲ್ಲಿ ಕಂಚಿನ ಪದಕ ಗೆದ್ದ ನಂತರ ಇವರಿಗೆ ಹಿರಿಯ ಗುಮಾಸ್ತ ರಿಂದ ಗೆಜೆಟೆಡ್ ಅಧಿಕಾರಿ ಶ್ರೇಣಿಗೆ ಬಡ್ತಿ ನೀಡಲಾಯಿತು. ಮಲಿಕ್ ಅವರು ರೋಹ್ಟಕ್‌ನಲ್ಲಿರುವ ಮಹರ್ಷಿ ದಯಾನಂದ ವಿಶ್ವವಿದ್ಯಾಲಯದಿಂದ ದೈಹಿಕ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದ್ದಾರೆ.

ಸೆಪ್ಟೆಂಬರ್ 2016 ರಂದು ಇವರು ವಿಶ್ವವಿದ್ಯಾಲಯದ ಕುಸ್ತಿ ನಿರ್ದೇಶಕಿ ಯಾಗಿ ನೇಮಕ ಮಾಡಲಾಗಿದೆ.

ಇವರ ಕ್ರೀಡಾ ಸಾಧನೆಯನ್ನು ಪರಿಗಣಿಸಿ ಭಾರತ ಸರ್ಕಾರವು ಪದ್ಮಶ್ರೀ (2017), ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ (2016) ಪ್ರಶಸ್ತಿ ನೀಡಿ ಗೌರವಿಸಿದೆ.



# ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು...

# ಸಾಧನೆಯ ಶಿಖರವೇರಿದ ಪುಟ್ಟ ಬಾಲಕರು

ಪಂಜಾಬ್ ರಾಜ್ಯದ ರೋಬರ್ ಜಿಲ್ಲೆಯ ಐದು ವರ್ಷದ ಬಾಲಕ ತೇಗ ಬೀರ್ ಸಿಂಗ್ ಆಫ್ರಿಕಾದ ಅತಿ ದೊಡ್ಡ ಪರ್ವತವಾದ ಮೌಂಟ್ ಕಿಲಿಮಾಂಜರೋ ವನ್ನು ಚಾರಣಗೈದ ಏಷ್ಯಾದ ಪ್ರಥಮ ಅತ್ಯಂತ ಕಿರಿಯ ವಯಸ್ಸಿನ ಬಾಲಕನಾಗಿದ್ದಾನೆ. ಪ್ರಸ್ತುತ ವರ್ಷದ ಅಗಸ್ಟ್ 18ರಂದು ಚಾರಣ ಆರಂಭಿಸಿದ ಈ ಬಾಲಕ ಕಿಲಿಮಾಂಜರೋ ಪರ್ವತದ 5895 ಮೀಟರ್ ಎತ್ತರದ ಉಹರು ಪಾರ್ಕನ್ನು ಆಗಸ್ಟ್ 23ರಂದು ತಲುಪಿದ.

ಸಿಖ್ಖರ ಧರ್ಮ ಗ್ರಂಥದ ವಾಹೇ ಗುರುವನ್ನು ಜಪಿಸುತ್ತಾ ತನ್ನ ಕುಟುಂಬದ ಪ್ರೋತ್ಸಾಹ ಮತ್ತು ಬೆಂಬಲವನ್ನು ಹೊತ್ತು ಆ ಬಾಲಕ ತೇಗ್ ಬೀರ್ ಸಾಗಿದ. ಕಡಿದಾದ ಏರುಗಳಲ್ಲಿ ಆ ಬಾಲಕನ ಕುಟುಂಬ ನಿರಂತರವಾಗಿ ಪ್ರೋತ್ಸಾಹಿಸುತ್ತಾ ಬಾಲಕ ಒಂದೊಂದು ಹಂತಗಳನ್ನು ಏರಿದಾಗಲೂ ಸಂತಸದಿಂದ ಹುರಿದುಂಬಿಸುತ್ತಿದ್ದರು. ಅತ್ಯಂತ ಕಡಿಮೆ ಆಕ್ಸಿಜನ್ ಲೆವೆಲ್ ನ್ನು ಹೊಂದಿದ ಕಡಿದಾದ ಪರ್ವತಗಳನ್ನು ಏರುವಾಗ ಅತ್ಯಂತ ಕಡಿಮೆ ಜೀರೋ ಡಿಗ್ರಿ ತಾಪಮಾನದಲ್ಲಿ ಬಾಲಕ ಎದೆಗುಂದದೆ ತನ್ನವರ ಪ್ರೋತ್ಸಾಹದಿಂದ ಮುಂದೆ ಸಾಗಿದ. ಆತನ ದೃಢತೆ, ಆತ್ಮವಿಶ್ವಾಸ ಎಲ್ಲರ ಹುಬ್ಬೇರುವಂತೆ ಮಾಡಿತ್ತು.



ಆತನ ಈ ಸಾಧನೆಗೆ ಇಂಬು ಕೊಟ್ಟವರು ಆತನ ತಂದೆ ಸುಖೀಂದರ್ ದೀಪ್ ಸಿಂಗ್ ಮತ್ತು ಆತನ ಕೋಚ್ ವಿಕ್ರಂ ಜೀತ್ ಸಿಂಗ್ ಗುಮಾನ್. ವಿಕ್ರಂಜೀತ್ ಓರ್ವ ಹ್ಯಾಂಡ್ ಬಾಲ್ ಕೋಚ್ ಆಗಿ ನಿವೃತ್ತರಾಗಿದ್ದು ಬಾಲಕ ತೇಗ್ ಬೀರ್ ಕಾರ್ಡಿಯೋ ವ್ಯಾಸ್ಕ್ಯುಲರ್ ತರಬೇತಿಯನ್ನು ನೀಡಿದ್ಧರಲ್ಲದೇ ಜೊತೆಗೆ ಶ್ವಾಸಕೋಶದ ಕ್ಷಮತೆಯನ್ನು ಹೆಚ್ಚಿಸುವ ಮತ್ತಷ್ಟು ವ್ಯಾಯಾಮಗಳನ್ನು ನಿರಂತರವಾಗಿ ತರಬೇತಿಯ ಮೂಲಕ ಆತನ ಕ್ಷಮತೆಯನ್ನು ಹೆಚ್ಚಿಸಿದ್ದರು. ಸುಮಾರು ಒಂದು ವರ್ಷ ಕಾಲ ಅಂದರೆ ತನ್ನ 4ನೇ ವಯಸ್ಸಿನಿಂದಲೇ ನಿರಂತರ ಒಂದು ವರ್ಷ ತರಬೇತಿ ಪಡೆದ ಬಾಲಕ ತೇಗ್ ಬೀರ್ ವಾರಾಂತ್ಯಗಳಲ್ಲಿ ಹತ್ತಿರದ ಪರ್ವತಗಳನ್ನು ಆರೋಹಣ ಮಾಡುತ್ತಾ ತನ್ನ ದೈಹಿಕ ಕ್ಷಮತೆಯ ಪರೀಕ್ಷೆ ನೀಡುತ್ತಿದ್ದನು. ಇದರ ಜೊತೆ ಜೊತೆಗೆ ಬಾಲಕ ಉತ್ತಮ ಡಯಟ್ ಪದ್ಧತಿಯುನ್ನು ಕೂಡ ಅನುಸರಿಸುತ್ತಿದ್ದನು.








ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಹವಾಮಾನ ಪ್ರತಿಕೂಲತೆಗಳು ಮತ್ತು ಹಿಮದ ಮಳೆಯು ಹೊರತಾಗಿಯೂ ಕೂಡ ತೇಗ್ ಬೀರ್ ತಂಡದಲ್ಲಿ ಆತನ ಜೊತೆಗೆ ಆತನ ತಂದೆ ಇಬ್ಬರೂ ಗೈಡ್ಗಳು ಮತ್ತು ಇಬ್ಬರು ಸಹಾಯಕರು ಇದ್ದು ಮೊದಲ ಹಂತದಲ್ಲಿ ವಿಫಲವಾದರೂ, ಪ್ರಯತ್ನವನ್ನು ಕೈಬಿಡದೆ ಮತ್ತೆ ಮುಂದುವರೆಸಿ ಎರಡನೇ ಬಾರಿ ಮೈಕಮ್ ಎಂಬ ದಾರಿಯಲ್ಲಿ ಸಾಗಿ ತಮ್ಮ ಚಾರಣವನ್ನು ಪೂರೈಸಿದರು.

ಈ ಹಿಂದೆ ಸೆರ್ಬಿಯಾದ ಇನ್ನೋರ್ವ ಬಾಲಕ ಓಜ್ವಾನ್ ಜೆಕೋವಿಕ್ ಈ ಪರ್ವತವನ್ನು ಚಾರಣಗೈದ ದಾಖಲೆಯನ್ನು ಹೊಂದಿದ ಅತಿ ಕಿರಿಯ ವಯಸ್ಸಿನ ಬಾಲಕನಾಗಿದ್ದ. ಇದೀಗ ತೇಗ್ ಬೀರ್ ಕೂಡ ಈ ವರ್ಷದಲ್ಲಿ ಈ ಸಾಧನೆ ಮಾಡಿದ ಎರಡನೆಯ ಬಾಲಕನಾಗಿದ್ದು ಅತ್ಯಂತ ಕಿರಿಯ ವಯಸ್ಸಿನ ಚಾರಣಿಗ ಎಂದು ಆತನ ಹೆಸರು ದಾಖಲಾಗಿದೆ. 2024ರ ಆರಂಭದ ದಿನಗಳಲ್ಲಿ ತೆಗ್ಬಿರ್ ಭಾರತ ದೇಶದ ಮೌಂಟ್ ಎವರೆಸ್ಟ್ ಪರ್ವತದ ಬೇಸ್ ಕ್ಯಾಂಪ್ ತಲುಪಿ ತನ್ನ ಅಸೀಮ ಸಾಹಸವನ್ನು ಮೆರೆದಿದ್ದಾನೆ.

ಇದೇ ಆಗಸ್ಟ್ 30ರಂದು ಭಾರತಕ್ಕೆ ಮರಳಲಿರುವ ತೇಗ್ ಬೀರ್ ತನ್ನೊಂದಿಗೆ ನ್ಯಾಷನಲ್ ಪಾರ್ಕ್ ನ ಅತಿ ಕಿರಿಯ ಚಾರಣಿಗ ಎಂಬ ಸರ್ಟಿಫಿಕೇಟ್ ಅನ್ನು ಮಾತ್ರ ತರುತ್ತಿಲ್ಲ. ಅಪಾರ ಬದ್ಧತೆ, ಸಾಧನೆಯ ತವಕ ಮತ್ತು ಶ್ರದ್ಧೆಗೆ ಯಶಸ್ಸು ಕಟ್ಟಿಟ್ಟ ಬುತ್ತಿ ಎಂಬ ಪಾಠವನ್ನು ಹೊತ್ತು ತರುತ್ತಿದ್ದಾನೆ.

ಕೇವಲ ಐದರ ಹರೆಯದಲ್ಲಿ ವೇದ ಪಾಠಗಳಲ್ಲಿ ಪಾರಂಗತನಾಗಿದ್ದ ಶಂಕರಾಚಾರ್ಯರು ಮುಂದೆ ಬ್ರಹ್ಮ ಸೂತ್ರಕ್ಕೆ ಭಾಷ್ಯಗಳನ್ನು ಬರೆದು ಬ್ರಹ್ಮಜ್ಞಾನ ಪ್ರವರ್ತಕರೆನಿಸಿದರು ಎಂದು ಇತಿಹಾಸಕಾರರು ಹೇಳಿದರೆ ನಾವು ನಂಬುವುದಿಲ್ಲ.

ಪುರಾಣಗಳಲ್ಲಿ ನಚಿಕೇತ ಎಂಬ ಬಾಲಕ ಕೇವಲ ಐದು ವರ್ಷ ವಯಸ್ಸಿನಲ್ಲಿಯೇ ಬಹಳಷ್ಟು ಮಂತ್ರಗಳನ್ನು ಸ್ತೋತ್ರಗಳನ್ನು ಕರಾರುವಾಕ್ಕಾಗಿ ಪಠಿಸುತ್ತಿದ್ದ ಮತ್ತು ತಂದೆಯ ಆಣತಿಯ ಮೇರೆಗೆ ಸಶರೀರನಾಗಿ ಯಮನನ್ನು ಭೇಟಿಯಾದನು. ಸುಮಾರು ಮೂರು ದಿನಗಳ ಕಾಲ ಹಸಿವು ನೀರಡಿಕೆಗಳನ್ನು ತಡೆದುಕೊಂಡು ಯಮನು ಹಿಂದಿರುಗುವವರೆಗೆ ಯಮಲೋಕದ ಬಾಗಿಲಲ್ಲಿ ಕಾಯ್ದು ನಿಂತ ಬಾಲಕ ಅತ್ಯಂತ ಕರಾಳ ರೂಪದ ಯಮನನ್ನು ಕಂಡು ಅಂಜದೆ ಅಳುಕದೇ ಆತನೊಂದಿಗೆ ಸಂವಾದ ಮಾಡಿದ. ಐದರ ಪುಟ್ಟ ಬಾಲಕ ನಚಿಕೇತನ ಧೈರ್ಯ ಸಾಹಸ ಮತ್ತು ಜ್ಞಾನ ಪಿಪಾಸೆಯನ್ನು ಕಂಡು ಯಮ ಬೆರಗಾದ.

ಮುಂದೆ ನಚಿಕೇತ ಯಮನೊಂದಿಗೆ ಜೀವನ್ಮರಣಗಳ, ಮೃತ್ಯುವಿನ ನಂತರದ ಬದುಕಿನ ಅಸ್ತಿತ್ವದ ಕುರಿತು ಕೇವಲ ಐದು ವರ್ಷ ವಯಸ್ಸಿನಲ್ಲಿ ಜ್ಞಾನವನ್ನು ಪಡೆದುಕೊಂಡನು ಎಂಬುದನ್ನು ಪುರಾಣಗಳಲ್ಲಿ ಓದಿದಾಗಲೂ ಕೇಳಿದಾಗಲೂ ಸಂದೇಹ ವ್ಯಕ್ತಪಡಿಸುವ ನಮಗೆ ನಾವು ಮಾಡುತ್ತಿರುವ ಕೆಲಸದ ಕುರಿತಾದ ಅಸೀಮ ಶ್ರದ್ಧೆ, ಆತ್ಮವಿಶ್ವಾಸ ಮತ್ತು ದೃಢ ಮನಸ್ಥಿತಿ ಇದ್ದರೆ ಏನು ಬೇಕಾದರೂ ಸಾಧಿಸಬಹುದು ಎಂಬುದನ್ನು ಮೇಲಿನ ಮೂವರು ಸಾಧಕರ ಬದುಕಿನ ಪುಟಗಳಿಂದ ಅರಿಯಬಹುದು.

ಎಲ್ಲದಕ್ಕೂ ಪುರಾವೆಗಳನ್ನು ಕೇಳುವ ನಾವುಗಳು, ನಮ್ಮ ಪ್ರಾಚೀನ ಋಷಿ ಮುನಿಗಳು ಬರೆದಿಟ್ಟ ಗ್ರಂಥಗಳಲ್ಲಿ ಶಂಕರಾಚಾರ್ಯರು ಮತ್ತು ಬಾಲಕ ನಚಿಕೇತರ ವಿಷಯಗಳನ್ನು ಪುರಾವೆಗಳು ಎಂದು ಒಪ್ಪದೇ ವಿತಂಡವಾದದಿಂದ ತಳ್ಳಿ ಹಾಕುವುದು ನಮ್ಮ ಜ್ಞಾನದ ಬರವನ್ನು ಸೂಚಿಸುತ್ತದೆಯೇ ಹೊರತು ಅವರ ಅಪರಿಮಿತ ಜ್ಞಾನವನ್ನು ಕುಂದಿಸುವುದಿಲ್ಲ ಎಂಬುದರ ಅರಿವನ್ನು ನಾವು ಹೊಂದಬೇಕು.

ಗಾಳಿ ನಮ್ಮ ಕಣ್ಣಿಗೆ ಕಾಣುವುದಿಲ್ಲ ಎಂದ ಮಾತ್ರಕ್ಕೆ ಅದರ ಇರವನ್ನು ತಿರಸ್ಕರಿಸಲಾಗುತ್ತದೆಯೇ?

ನಮ್ಮ ದೇಹದಲ್ಲಿ ಆತ್ಮ ಇಲ್ಲ ಎಂದು ಸಾಧಿಸುತ್ತಿದ್ದ ವಿಜ್ಞಾನಿಗಳು ಕೂಡ ಇದೀಗ ವ್ಯಕ್ತಿ ಜೀವನವನ್ನು ಕಳೆದುಕೊಂಡ ಮರುಕ್ಷಣದಲ್ಲಿಯೇ ಆತನ ದೇಹದ ತೂಕ 17 ಗ್ರಾಮಗಳಷ್ಟು ಕಡಿಮೆಯಾಗುತ್ತದೆ ಎಂಬ ಸತ್ಯವನ್ನು ಒಪ್ಪಿಕೊಂಡಿದ್ದು ಅದು ಆತ್ಮದ ಅಸ್ತಿತ್ವವನ್ನು ನಂಬುವವರ ನಂಬಿಕೆಗೆ ಇಂಬು ಕೊಟ್ಟಂತಾಗಿದೆ.

ಕೆಲ ನಂಬಿಕೆಗಳು ನಮ್ಮನ್ನು ಸದಾ ಎಚ್ಚರಿಸುತ್ತವೆ. ದೇವರ ಅಸ್ತಿತ್ವವನ್ನು ಒಪ್ಪುವ ಜನರು ತಮ್ಮೆಲ್ಲ ಕಷ್ಟ ಗಳನ್ನು ಪರಿಹರಿಸಲು, ಧೈರ್ಯದಿಂದ ಮುನ್ನಡೆಸಲು, ಸುಖದ ದಿನಗಳು ಮುಂದಿವೆ ಎಂಬ ಭರವಸೆಯನ್ನು ಹೊಂದಲು ಆ ದೇವರು ಇದ್ದಾನೆ ಎಂಬ ಭರವಸೆಯಿಂದ ಅದೆಷ್ಟೇ ಕಷ್ಟ–ನಿಷ್ಠುರಗಳು ಬಂದರೂ ಸಹಿಸಿ ಬದುಕಿನಲ್ಲಿ ಮುನ್ನಡೆಯುತ್ತಾರೆ. ಮತ್ತೆ ದೇವರನ್ನು ನಂಬದ ಕೆಲ ನಾಸ್ತಿಕವಾದಿಗಳು ಕೂಡ ಪ್ರಕೃತಿಯಲ್ಲಿ ಅದಮ್ಯ ಶಕ್ತಿ ಇದ್ದು ಅದು ತನ್ನ ಸಮತೋಲನವನ್ನು ಸದಾ ಕಾಯುತ್ತದೆ ಎಂದು ಒಪ್ಪುತ್ತಾರೆ. ಯಾವ ರೀತಿ ಬದುಕೆಂಬ ನದಿಯಲ್ಲಿ ಪುಟ್ಟ ದೋಣಿ ಎಂಬ ಮನುಷ್ಯ ನಂಬಿಕೆ ಎಂಬ ಹುಟ್ಟನ್ನು ಹಾಕುತ್ತಾ ಸಾಗುತ್ತಾನೆಯೋ,ಅವರವರ ವಾದಗಳು ಏನೇ ಇದ್ದರೂ ಬದುಕನ್ನು ಸಾಗಿಸಲು ಭರವಸೆ ಬೇಕೇ ಬೇಕು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಏನಂತೀರಾ ಸ್ನೇಹಿತರೆ?

## ಕವಿ ಮನಸು

### ವೇದನೆ



ಸುರಿಯುತಿದೆ ಮಳೆ
ತಂಪಾಗಿಹಳು ಇಳೆ
ಕೊಚ್ಚಿ ಹೋಗುತಿದೆ ಕೊಳೆ
ದಿಟ್ಟಿಸುತ್ತಿರುವಳು ಮಹಿಳೆ

ಘಮಿಸುತ್ತಿರುವ ಹೂವ ಮುಡಿಗೇರಿಸಿ
ಮುಂಗುರುಳುಗಳ ಬೆರಳಿನಿಂದ ಸರಿಸಿ
ಶ್ವೇತ ವರ್ಣದ ವಸ್ತ್ರವ ಧರಿಸಿ
ಕುಳಿತಿರುವಳು ಮರವನು ಆಶ್ರಯಿಸಿ

ನಲ್ಲ ನಿಲ್ಲದ ವಿರಹ ವೇದನೆ
ಕಾಡುತಿದೆ ಒಂಟಿತನದ ಸಂವೇದನೆ
ಯಾರಿಗೆ ಹೇಳಲಿ ನನ್ನೀ ಭಾವನೆ
ಅವನಿಗಾಗಿ ನಡೆಯುತಿದೆ ಶೋಧನೆ

ಕಾಯುತ್ತಿರುವೆ ಅವನು ಬರುವ ದಾರಿ
ಮನವು ಓಡುತ್ತಿದೆ ಪ್ರೀತಿಯ ಬೆನ್ನೇರಿ
ಮನಸ್ಸಿನ ಭಾವನೆಗಳು ಉಕ್ಕೇರಿ
ಮಳೆಯಲೂ ಅಲೆದಿದೆ ಬಾಯಾರಿ

– ಚೇತನ ಭಾರ್ಗವ
ಬೆಂಗಳೂರು

### ತಾಳುವ ಶಕ್ತಿ ನೀಡೆನಗೆ



ಭಕ್ತಿಯು ತುಂಬಿರೆ ಭಕ್ತಗೆ ಒಲಿಯುವೆ
ಶಕ್ತಿಯ ನೀಡು ಭಗವಂತ

ಸುಕ್ಕಿನ ನಡುವಲಿ ಸಿಕ್ಕಿದೆ ಬದುಕಿದು
ಸುಕ್ಕನು ಬಿಡಿಸು ಶ್ರೀಕಾಂತ

ಈಜಲು ಇಳಿದಿರೆ ಗಾಜಿನ ಚೂರಿದೆ
ಸೂಜಿಯ ತರದಿ ಚುಚ್ಚುವುದು

ಕಡಲಿನ ಅಲೆಗಳ ನಡುವಿನ ಯಾನವು
ದಡವದು ಸನಿಹ ಕಾಣಿಸದು

ಹಡೆದಿಹ ಮಾತೆಯು ಮಡಿಲಿನ ಕಂದನ
ಹಿಡಿದಿಡುವಂತೆ ರಕ್ಷಿಪುದು

ಬಾಳಿನ ಪಯಣದೆ ಗೋಳಿದೆ ಅರಿವೆನು
ತಾಳುವ ಶಕ್ತಿ ನೀಡೆನಗೆ

ಬಿತ್ತುತ ಭಕ್ತಿಯ ಚಿತ್ತದಿ ತುಂಬಿದ
ಕತ್ತಲೆ ಕಳೆಯೊ ಶ್ರೀನಿಧಿಯೆ॥

ಪೆರ್ಮುಖ ಸುಬ್ರಹ್ಮಣ್ಯ ಭಟ್

COLD PRESSED OILS
HEALTH Benefits



- Heart Healthy
- Diabetes Friendly
- Healthy Skin & More
- Hair Fall Control

Nandi Enterprises
C/o HAMPI TIMES
Valmiki Circle, HOSAPETE
9482599089

# ಬೃಹತ್ ಮಾಲ್‌ಗಳಲ್ಲಿ ಮರೆಯಾಗುತ್ತಿದೆ ಕನ್ನಡ

# ಕನ್ನಡವನ್ನು ಉಳಿಸುವವರು ನಾವಾಗಬೇಕಲ್ಲವೇ?

ಹೆಮ್ಮೆ ಇದೆ ಇದೆನ್ನ ಜನ್ಮಭೂಮಿ
ಮುದ್ದು ಮಾತ ಕಲಿಸಿದ ದೈವಭೂಮಿ
ಪರಕೀಯ ವ್ಯಾಮೋಹ ದೂರಾಗಿಸಿ
ನಮ್ಮ ತನವನು ಚಿಗುರಿಸಿ
ನುಡಿವ ಸದಾ ಕನ್ನಡ ಕನ್ನಡ
ಉಸಿರುಸಿರಲಿ ಪಸರಿಸಲಿ ಕನ್ನಡ ಕನ್ನಡ.

ಕೆಲವೊಮ್ಮೆ ಅನಿಸುತ್ತದೆ ನನ್ನ ತಾಯ್ನಾಡಿನಲ್ಲಿ ನಾನೇ ಪರಕೀಯ. ಎತ್ತ ಸಾಗುತ್ತಿದೆ ನಮ್ಮ ಕನ್ನಡದ ಇರುವು? ಅನ್ಯ ಭಾಷಿಯರ ಗುಲಾಮರಾಗುತ್ತಿದ್ದೇವ ಕನ್ನಡಿಗರು? ಯಾವುದೇ ಜಾಹೀರಾತಿನಲ್ಲಿ ಆಂಗ್ಲ ಭಾಷೆ, ಹಿಂದಿ ಭಾಷೆ,ಎಲ್ಲಿ ಹೋಯಿತು ಕನ್ನಡ? ಇತರ ರಾಜ್ಯಗಳಲ್ಲಿರುವಂತೆ ಮಾತೃಭಾಷೆಗೆ ಪ್ರಥಮ ಆದ್ಯತೆಯನ್ನೇಕೆ ನೀಡಬಾರದು? ಈ ಪ್ರಶ್ನೆಯನ್ನು ನಮಗೆ ನಾವೇ ಕೇಳಿಕೊಳ್ಳೋಣ.

ಔದ್ಯೋಗಿಕ ಕ್ಷೇತ್ರದಲ್ಲಿ ಮುಂದುವರೆಯುತ್ತಿರುವ ಆಧುನಿಕ ಜಗತ್ತಿನಲ್ಲಿ ಕನ್ನಡಕ್ಕಾಗಿ ದೊರೆಯುತ್ತಿರುವ ಮನ್ನಣೆ ಕಡಿಮೆ ಎನಿಸುತ್ತಿಲ್ಲವೇ? ಅದಿರಲಿ ನಮ್ಮ ರಾಜ್ಯದ ರಾಜಧಾನಿ ಬೆಂಗಳೂರಿಗೆ ಹೋದರೆ ಯಾವುದೋ ವಿದೇಶಕ್ಕೆ ಹೋಗಿದ್ದೇವೆ ಎನ್ನುವಂಥ ಭಾವ ಮೂಡುತ್ತದೆ. ಗೊತ್ತಿದ್ದರೂ ಕನ್ನಡ ಮಾತನಾಡದ ಜನ, ಘನತೆ ತೋರಿಸಲು ಕನ್ನಡವನ್ನೇ ಬಳಸದ ಜನ, ಇವರೆಲ್ಲರ ನಡುವೆ ಮಾತು ಬಂದರೂ ಮೂಕರಂತೆ ವರ್ತಿಸಬೇಕಾಗಿದೆ ಅಪ್ಪಟ ಕನ್ನಡ ಮಾತನಾಡುವ ಜನ.

ದೊಡ್ಡ ದೊಡ್ಡ ಮಾಲ್‌ಗಳಲ್ಲಿ ಸಂಜೆ ವಿನೋದಕ್ಕಾಗಿ ಹಾಡುಗಳನ್ನು ಬಿತ್ತರಿಸಲಾಗುತ್ತದೆ ಈ ಸಂದರ್ಭದಲ್ಲಿ ಕನ್ನಡದ ಹಾಡುಗಳನ್ನು ಕೇಳಲು ವಿನಂತಿಸಬೇಕೇ ಕನ್ನಡ ಪರ ಹೋರಾಟಗಾರರು? ಅನ್ನ ಈ ತಾಯ್ನಾಡ ಭಿಕ್ಷೆ, ನೀರು ಗಾಳಿ ಈ ಭೂಮಿಯ ಭಿಕ್ಷೆ ಆದರೆ ಭಾಷೆ ಏಕೆ ಕನ್ನಡ ಬೇಡ?



ಸಿಂಧುಗುಬ್ಬಿ
ಶಿಕ್ಷಕಿ, ಹೇರೂರು, ಗುಬ್ಬಿ ತಾ.

Scan For Digital Colourful
HAMPI TIMES E-paper

ಈ ನಿಟ್ಟಿನಲ್ಲಿ ಬಹುಶಹ ಎಷ್ಟು ಯೋಚಿಸಿದರು ಕಡಿಮೆ ಎನಿಸುತ್ತದೆ. ಜನಗಳು ಆಂಗ್ಲ ಭಾಷಾ ವ್ಯಾಮೋಹಕ್ಕೆ ಸಿಲುಕಿ ಕನ್ನಡವನ್ನು ಪರದೆಯ ಹಿಂದೆ ಸರಿಸುತ್ತಿದ್ದಾರೆ ಎಂಬ ಭಾವನೆ ಮೂಡುತ್ತಿದೆ.

ಹೌದು ಔದ್ಯೋಗಿಕ ದೃಷ್ಟಿಯಿಂದ ಆಂಗ್ಲ ಭಾಷೆ ಬಳಕೆ ಅಥವಾ ಇತರ ಭಾಷಾ ಬಳಕೆ ತಪ್ಪಿಲ್ಲ ಆದರೆ ಮನೆಗಳಲ್ಲಿ ಮತ್ತು ಹೊರಗಿನ ವ್ಯವಹಾರ ನಿರ್ವಹಣೆಯಲ್ಲಾದರೂ ಕನ್ನಡವನ್ನು ಬಳಸಬಹುದಲ್ಲವೇ? ಕರುನಾಡು, ಕನ್ನಡಿಗರ ನಾಡು, ಕರ್ನಾಟಕ ಎಂಬ ಬಿರುದಾಂಕಿತ ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಮೊದಲ ಸ್ಥಾನಮಾನ ದೊರೆಯಬೇಕು. ಉಸಿರುಸಿರಲಿ ಅಂತರ್ಗತವಾಗಬೇಕು ಕನ್ನಡ.

ಕನ್ನಡ ನಾಡು ನುಡಿಯ ಬಗ್ಗೆ ನಮ್ಮಲ್ಲಿರುವ ಕಾಳಜಿ ಮತ್ತಷ್ಟು ಜಾಗೃತವಾಗಬೇಕು ಮೈಸೂರು ರಾಜ್ಯ ಎಂದಾಗಿದ್ದ ನಮ್ಮ ರಾಜ್ಯವನ್ನು ಕರ್ನಾಟಕ ಎಂದು ನಾಮಕರಣ ಮಾಡಿ 50 ಸಂವತ್ಸರಗಳು ತುಂಬಿದ ಶುಭಸುದಿನ. 1956 ರಲ್ಲಿ ಏಕೀಕರಣವಾದಾಗಿನಿಂದಲೂ ಮೈಸೂರು ರಾಜ್ಯವೆಂದೆ ಇದ್ದ ಈ ಪುಣ್ಯ ನೆಲಕ್ಕೆ 1973ರ ನವೆಂಬರ್ ಒಂದರಂದು ಕರ್ನಾಟಕ ಎಂಬ ನೂತನ ಹೆಸರಿನಿಂದ ಅಧಿಕೃತವಾಗಿ ಅಂಗೀಕರಿಸಲಾಯಿತು ಇಲ್ಲಿನ ಸಾಂಸ್ಕೃತಿಕ, ನೈಸರ್ಗಿಕ, ಆಧ್ಯಾತ್ಮಿಕ, ಹಾಗೂ ವೈವಿಧ್ಯತೆಗಳಲ್ಲಿ ಇಡೀ ಪ್ರಪಂಚವೇ ತಿರುಗಿ ನೋಡುವಂತಹ ಛಾಪನ್ನು ಮೂಡಿಸಿರುವುದು ನಮ್ಮ ಹೆಮ್ಮೆಯ ರಾಜ್ಯ ಕರ್ನಾಟಕ.

ಇಲ್ಲಿನ ಕರಾವಳಿ ಸೌಂದರ್ಯ, ಮಲೆನಾಡ ವೈಭವ, ಪಶ್ಚಿಮ ಘಟ್ಟಗಳ ನಿಸರ್ಗದ ಸೊಬಗು, *ಹಲವು ಕವಿಮನಗಳನ್ನ ಸೆಳೆದು ಕವಿಮನದಿಂಗಿತದ ರಸಕಾವ್ಯ ಗಂಗೆಯ ಹರಿಸಲು ಸ್ಪೂರ್ತಿಯ ಸೆಲೆಯಾಗಿವೆ.

ಅಂತೆಯೇ ಕನ್ನಡ ಭಾಷೆಗೆ ಅತಿ ಹೆಚ್ಚು ಅಂದರೆ ಎಂಟು ಜ್ಞಾನಪೀಠ ಪ್ರಶಸ್ತಿಯನ್ನು ತಂದು ಕೊಟ್ಟವರು ನಮ್ಮ ಹೆಮ್ಮೆಯ ಕವಿಗಳೇ ಆಗಿದ್ದಾರೆ.

ರಸಿಕರ ಕಂಗಳ ಸೆಳೆದಿದೆ ಈ ನಿಸರ್ಗದಮ್ಮನ ಅಂದ. ಸರ್ವಧರ್ಮಗಳ ಸಮನ್ವತೆಯ ನಾಡಿದು, ಹಲವು ದಾಸ ಶ್ರೇಷ್ಠರನ್ನು ಕೊಟ್ಟ ಪುಣ್ಯ ಭೂಮಿ ಇದು, ಶರಣರ ತಪೋ ಕ್ಷೇತ್ರವಿದು.

ಸುಲಿದ ಬಾಳೆಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ
ಸುಲಭವಾಗಿರ್ಪುದು ಕನ್ನಡ.
ಎಂಬ ಮಹಾ ಲಿಂಗರಂಗನ ಈ ಅನುಭವಾಮೃತವೇ ಸಾಲದೆ ಕನ್ನಡದ ಸೊಗಡನ್ನು ವರ್ಣಿಸಲು.

ಕನ್ನಡ

ನಮ್ಮ ಕರ್ನಾಟಕ ಕೇವಲ ವೈಶಿಷ್ಟತೆಯ ನಾಡು ಮಾತ್ರವಲ್ಲದೆ ಹಲವಾರು ಧೀಮಂತ ನಾಯಕರಗಳನ್ನು ಕಂಡ, ಸ್ವಾತಂತ್ರ್ಯ ಹೋರಾಟಗಾರರನ್ನು ಇತ್ತ ಧೀರ ನೆಲವು ಸಹ ಆಗಿದೆ. ಭಕ್ತಿ ಭಂಡಾರಿ ಬಸವಣ್ಣನವರು, ಪ್ರಥಮ ವಚನಗಾರ್ತಿ ಅಕ್ಕಮಹಾದೇವಿ, ಅನುಭವ ಮಂಟಪದ ನಿರ್ಮಾತೃ ಅಲ್ಲಮ ಪ್ರಭುಗಳು, ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ಬಿಲ್ಲಯ್ಯ,ಮಾರಯ್ಯ,ಆಯ್ದಕ್ಕಿ ಲಕ್ಕಮ್ಮ, ಹೀಗೆ ಹಲವಾರು ವಚನಗಾರರು ಜನಿಸಿದ ಪುಣ್ಯ ಇಳೆ ನಮ್ಮದಾಗಿದೆ.

ಹಲವು ಚಿಂತನಕಾರರನ್ನು, ವಿಮರ್ಶಕರನ್ನು, ಶಿಕ್ಷಣ ತಜ್ಞರನ್ನು, ವಿಜ್ಞಾನಿಗಳನ್ನು,ರಾಜಕೀಯ ಮುತ್ಸದ್ದಿಗಳನ್ನು, ಶಿವಶರಣರನ್ನು ಹೊಂದಿರುವ ನಾಡು ನಮ್ಮದು ಕರ್ನಾಟಕದ ಕೀರ್ತಿ ಇತ್ತೀಚಿನದಲ್ಲ ಸನಾತನತೆಯಲ್ಲಿಯೂ ನಮ್ಮ ರಾಜ್ಯವೇ ಮೂಲ ಸ್ಥಾನದಲ್ಲಿದೆ. ರಾಮಾಯಣದಲ್ಲಿ ಬರುವ ಹಲವು ಪುರಾಣಗಳಿಗೆ ಸಾಕ್ಷ್ಯ ನಮ್ಮ ರಾಜ್ಯದಲ್ಲಿವೆ.

ರಾಮಾಯಣದಲ್ಲಿ ರಾಮನ ಭಂಟ ಆಂಜನೇಯ ಹನುಮನಿಗೆ ಜನ್ಮ ನೀಡಿದ ಪುಣ್ಯಭೂಮಿ ಅಂಜನಾದ್ರಿ ಇರುವುದು ನಮ್ಮ ರಾಜ್ಯದಲ್ಲಿ ಎಂಬುದು ನಿಜಕ್ಕೂ ಹೆಮ್ಮೆ. ಹಾಗೆಯೇ ಪ್ರತಿ ಜಿಲ್ಲೆಯಲ್ಲಿಯೂ ತನ್ನದೇ ಆದ ವಿಶೇಷತೆಯನ್ನು ಹೊಂದಿದ್ದು ತನ್ನ ವಿಶಿಷ್ಟತೆಯಿಂದಲೇ ಎಲ್ಲರ ಚಿತ್ತ ತನ್ನತ್ತ ಸೆಳೆದುಕೊಳ್ಳುವ ರಾಜ್ಯ ನಮ್ಮ ಕರ್ನಾಟಕ.

ಗುಮ್ಮಟನಗರಿ –ವಿಜಯಪುರ
ಕೋಟೆನಾಡು– ಬಾಗಲಕೋಟೆ
ಎಡೆದೊರೆನಾಡು–ರಾಯಚೂರು
ಗಣಿನಾಡು –ಬಳ್ಳಾರಿ
ಮುದ್ರಣ ನಗರಿ– ಗದಗ
ವಿದ್ಯಾನಗರಿ– ಧಾರವಾಡ ಕುಂದಾನಗರಿ– ಬೆಳಗಾವಿ
ಬೆಣ್ಣೆ ನಗರ –ದಾವಣಗೆರೆ
ದುರ್ಗದ ನಾಡು– ಚಿತ್ರದುರ್ಗ
ಸಕ್ಕರೆ ನಾಡು –ಮಂಡ್ಯ
ಕಲ್ಪತರು ನಾಡು– ತುಮಕೂರು
ಬಂದರು ನಗರ– ಮಂಗಳೂರು
ಕೃಷ್ಣನಗರಿ –ಉಡುಪಿ
ಕಾಫಿ ನಾಡು– ಚಿಕ್ಕಮಗಳೂರು
ಚಿನ್ನದ ನಾಡು– ಕೋಲಾರ
ಮಂಜಿನ ನಗರಿ – ಕೊಡಗು
ಉದ್ಯಾನನಗರಿ– ಬೆಂಗಳೂರು
ಮಲ್ಲಿಗೆ ನಾಡು –ಮೈಸೂರು
ಮಲೆನಾಡ ಹೆಬ್ಬಾಗಿಲು– ಶಿವಮೊಗ್ಗ
ಕಡಲ ನಗರಿ– ಉತ್ತರ ಕನ್ನಡ
ರೇಷ್ಮೆ ನಾಡು– ರಾಮನಗರ
ಶರಣರ ನಾಡು –ಕಲಬುರಗಿ
ಸೂಫಿ ನಾಡು– ಬೀದರ್
ಏಲಕ್ಕಿ ನಗರ– ಹಾವೇರಿ

ಇಷ್ಟೆಲ್ಲ ವೈಶಿಷ್ಟ್ಯತೆ ಇರುವ ನಾಡು ನಮ್ಮ ಹೆಮ್ಮೆಯ ಕರ್ನಾಟಕ ಈ ನಾಡಿನಲ್ಲಿ ಜನಿಸಿದ ನಾವು ನಿಜಕ್ಕೂ ಧನ್ಯರು...

ಇಲ್ಲಿನ ಕೀರ್ತಿ, ಚರಿತ್ರೆ, ವೈಶಿಷ್ಟ್ಯತೆಗಳನ್ನು ಹೊಗಳಲು ಪದಗಳು ಸಾಲದು ಹಾಗೆ ಪುಟಗಳು ಸಾಲದು.* ನಮ್ಮತನವನ್ನು ಬಿಟ್ಟು ಕೊಡದೆ ಸರ್ವರನ್ನು ಭ್ರಾತೃತ್ವ ಭಾವನೆಯೊಂದಿಗೆ ಪ್ರೀತಿ, ಸಹಮತ,ಸಹಕಾರ, ಸಾಮಾಜಿಕ ಸ್ಥಾನಮಾನಗಳು ನೀಡಿ,ಉನ್ನತ ಆದರ್ಶಗಳನ್ನು ಮೈಗೂಡಿಸಿಕೊಂಡು ಹೆಮ್ಮೆಯ ಕನ್ನಡಿಗರಾಗೋಣ *ಕನ್ನಡಮ್ಮನಿಗೆ ಮಾದರಿ ಮಕ್ಕಳಾಗುವುದರೊಂದಿಗೆ ಕನ್ನಡವನ್ನು ಉಳಿಸುವವರು ನಾವಾಗಬೇಕು. ಇಂದೇ ಪಣತೊಡೋಣ ನಮ್ಮ ಮುಂದಿನ ಪೀಳಿಗೆಯ ಮಕ್ಕಳನ್ನು ಆದರ್ಶ ಕನ್ನಡಿಗರನ್ನಾಗಿಸುತ್ತೇವೆ ಎಂದು.

ಉಳಿಸೋಣ ಕನ್ನಡವ
ಬೆಳೆಸೋಣ ಕನ್ನಡವ
ಕಲಿಸೋಣ ಕನ್ನಡವ
ಬಳಸೋಣ ಕನ್ನಡವ

ಕರ್ನಾಟಕದಲ್ಲಿ ರಾರಾಜಿಸಲಿ ಕನ್ನಡ ಕನ್ನಡ ನಮ್ಮ ಹೆಮ್ಮೆಯ ಕನ್ನಡ
ಜೈ ಕರ್ನಾಟಕ ಜೈ ಕನ್ನಡಾಂಬೆ...

# ಗುರುವಾಣಿ ದೇವವಾಣಿ

**"ಗುರುವಿನ ಗುಲಾಮನಾಗುವ ತನಕ
ದೊರೆಯದಣ್ಣ ಮುಕುತಿ
ಪರಿ ಪರಿ ಶಾಸ್ತ್ರವ ಓದಿದರೇನು
ವ್ಯರ್ಥವಾಯಿತು ಭಕುತಿ"**

ಎಂಬ ಕನಕದಾಸರ ಈ ಮಾತುಗಳು ಗುರುವಿನ ಮಹತ್ವವನ್ನು ಎತ್ತಿ ತೋರಿಸುತ್ತವೆ. ಗುರುವಾಣಿಯನ್ನು ದೇವವಾಣಿ ಎಂದು ಹೇಳಲಾಗುತ್ತದೆ. ಅಂದರೆ ಸಮಾಜದಲ್ಲಿ ಗುರುವಿಗೆ ಅತ್ಯಂತ ಪವಿತ್ರ ಸ್ಥಾನವನ್ನು ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು. ಗುರು ಎಂದರೆ ಕೇವಲ ಅಕ್ಷರ ಕಲಿಸಿದವರಷ್ಟೇ ಅಲ್ಲದೆ ಒಬ್ಬ ವ್ಯಕ್ತಿಗೆ ಬೇಕಾಗಿರುವ ಒಳ್ಳೆಯ ಗುಣಗಳನ್ನು, ಸಂಸ್ಕಾರಗಳನ್ನು, ಕಲಿಸಿದವರೆಲ್ಲರೂ ಗುರುಗಳೇ.ಒಂದಕ್ಷರ ಕಲಿಸಿ ದಾತಮ್ ಗುರು ಎಂದು ಹೇಳಲಾಗುತ್ತದೆ.

ಪ್ರತಿಯೊಬ್ಬರ ಮೊದಲ ಗುರು ತಾಯಿಯಾಗಿರುತ್ತಾಳೆ ಮನೆ ಮೊದಲ ಪಾಠಶಾಲೆ,ಜನನಿ ತಾನೇ ಮೊದಲ ಗುರು, ಹುಟ್ಟಿದಾಗಿನಿಂದಲೇ ನಮಗೆ ತಾಯಿಯೇ ಗುರುವಾಗಿರುತ್ತಾಳೆ. ಶಾಲೆಗೆ ಹೊರಟ ನಂತರ ಶಿಕ್ಷಕರು ನಮಗೆ ಗುರುವಾಗುತ್ತಾರೆ. ತಂದೆ ತಾಯಿಗಳಿಂದ ಜೀವನದ ಪಾಠ ಕಲಿತರೆ ಗುರುಗಳಿಂದ ಬದುಕಿನ ಪಾಠ ಕಲಿಯುತ್ತೇವೆ. ತಂದೆ ತಾಯಿಯರು ನಮಗೆ ಜೀವವನ್ನು ಕೊಡುತ್ತಾರೆ ಆದರೆ ಗುರುಗಳು ಜೀವನವನ್ನು ರೂಪಿಸುತ್ತಾರೆ ಇಂತಹ ಗುರುಗಳ ದಿನಾಚರಣೆಯನ್ನು ಪ್ರತಿ ವರ್ಷ ಸಪ್ಟೆಂಬರ್ 5 ನ್ನು ಶಿಕ್ಷಕರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ. ನಮ್ಮ ದೇಶದ ಹೆಮ್ಮೆಯ ತತ್ವಶಾಸ್ತ್ರಜ್ಞ, ರಾಜ ನೀತಿಜ್ಞ ಮತ್ತು ಪ್ರಥಮ ಉಪರಾಷ್ಟ್ರಪತಿ ಹಾಗೂ ಎರಡನೇ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ್ದ ಶಿಕ್ಷಣ ಪ್ರೇಮಿ ಡಾಕ್ಟರ್ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನವನ್ನು ಶಿಕ್ಷಕರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ. ಸ್ವತ: ಶಿಕ್ಷಕರಾಗಿದ್ದ ರಾಧಾಕೃಷ್ಣನ್ ಅವರು ವಿದ್ಯಾರ್ಥಿಗಳ ಪಾಲಿನ ದೇವರಾಗಿದ್ದರು. ಛತ್ರಿಯು ಮಳೆಯನ್ನು ನಿಲ್ಲಿಸುವುದಿಲ್ಲ, ಬದಲಿಗೆ ನಮಗೆ ಮಳೆಯಲ್ಲಿ ನಿಲ್ಲುವ ಧೈರ್ಯವನ್ನು ಕೊಡುತ್ತದೆ. ಹಾಗೆ ಆತ್ಮವಿಶ್ವಾಸವು ನಮಗೆ ಯಶಸ್ಸನ್ನು ಕೊಡದಿದ್ದರೂ ಸಮಸ್ಯೆಯನ್ನು ಎದುರಿಸುವ ಶಕ್ತಿಯನ್ನು ಕೊಡುತ್ತದೆ. ಇಂಥ ಶಕ್ತಿಯನ್ನು ಕೊಡುವವರು ಗುರುಗಳು. ಮನೆ ಕಟ್ಟಲು ಹಣ ಬೇಕು ಮನಸ್ಸು ಕಟ್ಟಲು ಗುಣಬೇಕು ಹಣದಿಂದ ಕಟ್ಟಿದ ಮನೆಯಲ್ಲಿ ಎಲ್ಲರೂ ಇರುತ್ತಾರೆ ಆದರೆ ಗುಣದಿಂದ ಕಟ್ಟಿದ ಮನೆಯಲ್ಲಿ ಯೋಗ್ಯರಷ್ಟೇ ನೆಲೆಸುತ್ತಾರೆ ಅಂತಹ ಯೋಗ್ಯರನ್ನು ನಿರ್ಮಾಣ ಮಾಡುವವರು ಶಿಕ್ಷಕರು. ಒಳ್ಳೆಯತನಕ್ಕೆ ಸೋಲಿರಬಹುದು ಆದರೆ ಎಂದಿಗೂ ಸಾವಿರುವುದಿಲ್ಲ ಅಂತಹ ಒಳ್ಳೆಯತನವನ್ನು ಕಲಿಸುವವರು ಶಿಕ್ಷಕರು.



ಉಮಾ ಗವೀಶ ಕಲ್ಮಠ.
ಶಿಕ್ಷಕಿ, ಅಳವಂಡಿ.ಕೊಪ್ಪಳ

Hampi Times E-paper
SCAN AND READ

ಮಳೆಯ ಹನಿ ಸಣ್ಣದಿರಬಹುದು ಅದು ಬಿಡದೆ ಸುರಿದರೆ ದೊಡ್ಡ ದೊಡ್ಡ ನದಿಗಳೇ ಉಕ್ಕಿ ಹರಿಯುತ್ತವೆ. ಪ್ರಯತ್ನ ಸಣ್ಣದಾದರೂ ಪರವಾಗಿಲ್ಲ ನಿರಂತರವಾಗಿದ್ದರೆ ದೊಡ್ಡ ಸಾಧನೆ ಮಾಡಲು ಸಾಧ್ಯವಿದೆ. ಎಂಬ ಅಬ್ದುಲ್ ಕಲಾಂ ರವರ ಮಾತನ್ನು ನಮಗೆಲ್ಲ ತಿಳಿಸಿ ಕೊಟ್ಟಿರುವಂತಹ ನನ್ನ ಜೀವನದಲ್ಲಿ ನನ್ನ ಬದುಕಿಗೆ ಬೆಳಕನ್ನು ನೀಡಿರುವಂತಹ ನನ್ನ ಎಲ್ಲ ಗುರು ವೃಂದ ದಕ್ಕೂ ನನ್ನ ಕೋಟಿ ಕೋಟಿ ನಮನಗಳು. ನನಗೆ ಜೀವ ಕೊಟ್ಟು, ಜೀವನದ ಬೆಲೆ ತಿಳಿಸಿ, ಸದಾ ಮಾರ್ಗದರ್ಶಿಯಾಗಿರುವ ನನ್ನ ಮೊದಲ ಗುರು ನನ್ನ ಜನ್ಮದಾತರಿಗೂ ನನ್ನ ಕೋಟಿ ಕೋಟಿ ನಮನಗಳು. ಬಂಧುಗಳೆಂಬುವರು ಬಂದುಂಡು ಹೋಗುವರು ಬಂಧನವನರಿಯರು ಗುರುಗಳಿಗಿಂತ ಅನ್ಯ ಬಂಧುಗಳುಂಟೆ ಸರ್ವಜ್ಞ, ಎಂಬ ವಚನವನ್ನು ಸ್ಮರಿಸುತ್ತ ನನಗೆ ವಿದ್ಯಾಭ್ಯಾಸ ಮಾಡಲು ಸಕಲ ರೀತಿಯಲ್ಲಿ ತನ್ನ ತನು ಮನ ಧನ ಗಳಿಂದ ಶ್ರಮಿಸಿದ ನನ್ನ ಅಮ್ಮ (ಅಪ್ಪನ ತಾಯಿ) ನನ್ನು ಎಂದೆಂದಿಗೂ ಮರೆಯಲ ಅಸಾಧ್ಯ. ಆಕೆ ಅವಿದ್ಯಾವಂತಿಯಾದರೂ ಮೊಮ್ಮಕ್ಕಳಿಗೆ ವಿದ್ಯೆ ಕಲಿಯಲು ಸಹಾಯ, ಸಹಕಾರ,ನೀಡಿ ನಮಗಾಗಿ ತನ್ನ ಜೀವ ತೆಯ್ದ ಮಹಾ ಚೇತನ ನಮ್ಮಮ್ಮ. ನನ್ನ ಬದುಕಿನ ಗುರು ಆಕೆ. ಬಾಲ್ಯದಿಂದ ಇಲ್ಲಿಯವರೆಗೂ ನನಗೆ ಶಿಕ್ಷಣ ನೀಡಿದ ಹಾಗೂ ನಾನು ಇಂದು ಗುರುವಿನ ಸ್ಥಾನಕ್ಕೆ ಬರಲು ಕಾರಣರಾದ ಎಲ್ಲಾ ನನ್ನ ಗುರು ಬಳಗಕ್ಕೆ ಅನಂತ ಕೋಟಿ ನಮನಗಳು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ



ನಿಮ್ಮ ಹಂಪಿ ಪ್ರವಾಸ ಅನುಭವ

ನೀವು ಹಂಪಿಗೆ ಭೇಟಿ ನೀಡಿದ್ದೀರಾ? ಈ ಹಿಂದೆ ಹಂಪಿ ಹೇಗಿತ್ತು, ಈಗ ಹೇಗಾಗಿದೆ, ಮುಂದೆ ಏನೆಲ್ಲಾ ಸೌಲಭ್ಯಗಳು ಪ್ರವಾಸಿಗರಾಗಿ ನೀವು ನಿರೀಕ್ಷಿಸುತ್ತೀರಿ?
ನಿಮ್ಮದೆ ಅಭಿಪ್ರಾಯಗಳನ್ನು ಕಳುಹಿಸಿ, ಹಂಪಿ ಟೈಮ್ಸ್ ಮೂಲಕ ಸಂಬಂಧಿಸಿದ ಅಧಿಕಾರಿಗಳ ಗಮನ ಸೆಳೆಯಿರಿ.

ಹಂಪಿ ಪ್ರವಾಸೋದ್ಯಮ ಅಭಿವೃದ್ಧಿಗೆ ನಿಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡುವುದರೊಂದಿಗೆ ಪ್ರವಾಸೋದ್ಯಮ ಪ್ರಗತಿಗೆ ಸಹಕರಿಸಿ. ನಿಮ್ಮ ಅಭಿಪ್ರಾಯದೊಂದಿಗೆ ಹಂಪಿಗೆ ಭೇಟಿ ನೀಡಿದ ಕ್ಷಣದ ನಿಮ್ಮ ಫೋಟೊ ಇರಲಿ. ನಿಮ್ಮ ಅಭಿಪ್ರಾಯಗಳನ್ನು ಈ ಕೆಳಗಿನ ಇ-ಮೇಲ್/ವಾಟ್ಸಪ್‌ಗೆ ಕಳುಹಿಸಿರಿ.

ಇಂದು ಹಾಗೂ ಹಿಂದಿನ ಕಲರ್‌ಫುಲ್ ಹಂಪಿ ಟೈಮ್ಸ್ ಇ-ಪತ್ರಿಕೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಓದಿ, ಪ್ರತಿಕ್ರಿಯಿಸಿರಿ

www.hampitimes.com
epaper.hampitimes.com
hampitimes@gmail.com
@hampitimes

9448633038

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ । ಸಂವತ್ಸರ: ಕ್ರೋಧಿ

**03–09–2024 – ಮಂಗಳವಾರ**

| | |
|---|---|
| ತಿಥಿ | : ಅಮವಾಸ್ಯೆ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂರ್ವ ಪಾಲ್ಗುಣ |
| ಯೋಗ | : ಸಿದ್ಧಿ |
| ಕರಣ | : ನಾಗವ |
| ಸೂರ್ಯೋದಯ | : 06:10:57 |
| ಸೂರ್ಯಾಸ್ತ | : 18:41:00 |
| ರಾಹು ಕಾಲ | : 15:33–17:07 |
| ಯಮಘಂಡ ಕಾಲ | : 09:18–10:52 |
| ಗುಳಿಕ ಕಾಲ | : 12:26–13:59 |

## ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 02–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.06 ಅಡಿ |
| ಒಳ ಹರಿವು | 26272 ಕ್ಯುಸೆಕ್ |
| ಹೊರ ಹರಿವು | 15237 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 98.101 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1624.66 ಅಡಿ |
| ಒಳ ಹರಿವು | 813 ಕ್ಯುಸೆಕ್ |
| ಹೊರ ಹರಿವು | 10053 ಕ್ಯುಸೆಕ್ |
| ಸಾಮರ್ಥ್ಯ | 75.387 ಟಿಎಂಸಿ |

# ಚಾಲಕರು ಪ್ರಯಾಣಿಕರ ನಂಬಿಕೆ ಹೆಚ್ಚಿಸಿಕೊಳ್ಳಿ

## ಕಾನೂನು ಅರಿವು ನೆರವು ಕಾರ್ಯಕ್ರಮದಲ್ಲಿ ನ್ಯಾ.ಅಬ್ದುಲ್ ರಹೀಮಾನ ಎ.ನಂದಗಡಿ ಸಲಹೆ

## ಚಾಲಕ, ನಿರ್ವಾಹಕರು ಯಾರೊಂದಿಗೂ ಅಸಭ್ಯವಾಗಿ ವರ್ತಿಸಬಾರದು । ಕಾನೂನಿಕ ಜ್ಞಾನವೇ ದಾರಿದೀಪ





**ಹಂಪಿ ಟೈಮ್ಸ್ ಹೊಸಪೇಟೆ**
ಸಾರಿಗೆ ಇಲಾಖೆಗೆ ಸಾರ್ವಜನಿಕರೇ ಅವಿಭಾಜ್ಯ ಅಂಗ. ಪ್ರತಿನಿತ್ಯ ಸಂಚರಿಸುವ ಅಸಂಖ್ಯೆ ಸಾರ್ವಜನಿಕರು, ಬಸ್ ಚಾಲಕರು ಮತ್ತು ನಿರ್ವಾಹಕರ ಮೇಲೆ ಇಟ್ಟಿರುವ ನಂಬಿಕೆಯನ್ನು ಹೆಚ್ಚಿಸಿಕೊಳ್ಳಬೇಕು ಎಂದು ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಬ್ದುಲ್ ರಹೀಮಾನ ಎ.ನಂದಗಡಿ ಅವರು ಸಾರಿಗೆ ಇಲಾಖೆಯ ಚಾಲಕರು ಮತ್ತು ನಿರ್ವಾಹಕರಿಗೆ ಸಲಹೆ ನೀಡಿದರು.

ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹೊಸಪೇಟೆ, ಪೊಲೀಸ್ ಇಲಾಖೆ, ಸಾರಿಗೆ ಇಲಾಖೆ, ಆರೋಗ್ಯ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಸೆಪ್ಟಂಬರ್ 1 ರಂದು ಹೊಸಪೇಟೆಯ ಕೆ.ಎಸ್.ಆರ್.ಟಿ.ಸಿ ಘಟಕದಲ್ಲಿ ನಡೆದ ಚಾಲಕರಿಗೆ ಮತ್ತು ನಿರ್ವಾಹಕರಿಗೆ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಾರಿಗೆ ಇಲಾಖೆಯು ಸಾರ್ವಜನಿಕರನ್ನು ಒಂದಡೆಯಿಂದ ಮತ್ತೊಂದೆಡೆಗೆ ಸೇರಿಸುವ ಸಂಪರ್ಕ ಕೊಂಡಿಯಾಗಿದೆ. ಇಂತಹ ಸಾರಿಗೆ ಇಲಾಖೆಯು ಆರಂಭದಿಂದ ಶಿಸ್ತು, ಸಂಯಮ ಪಾಲಿಸುತ್ತಾ ಬಂದಿದ್ದು, ಅದನ್ನು ಇನ್ನಷ್ಟು ಹೆಚ್ಚಿಸಿಕೊಂಡಲ್ಲಿ ಅಪವಾದಗಳು ದೂರವಾಗಲಿವೆ ಎಂದು ತಿಳಿಸಿದರು. ಚಾಲಕರ ಕೆಲಸವನ್ನು ಮೆಚ್ಚಿ ಅವರಿಗೆ ಪ್ರಶಸ್ತಿ ನೀಡಲಾಗುತ್ತದೆ. ಯಾವುದೇ ಘಟಕದಲ್ಲಿನ ಒಬ್ಬ ಚಾಲಕ ಪ್ರಶಸ್ತಿ ಪಡೆದರೆ ಇಡೀ ಘಟಕವೇ ಸಾಧನೆ ಮಾಡಿದಂತೆ ಇತರರಿಗೆ ಪ್ರೇರಣೆಯಾಗಲಿದೆ ಎಂದು ತಿಳಿಸಿದರು.

ಪ್ರತಿಯೊಬ್ಬರಿಗೂ ಒಂದಿಲ್ಲೊಂದು ತೊಂದರೆ ತಾಪತ್ರಯಗಳು ಇದ್ದೇ ಇರುತ್ತವೆ. ಇದನ್ನು ಪ್ರತಿಯೊಬ್ಬರು ಅರಿಯಬೇಕು. ಯಾವುದೇ ತೊಂದರೆಗಳು ಎದುರಾದಾಗ ಸಂಯಮ ಕಳೆದುಕೊಳ್ಳಬಾರದು. ಸಾವಧಾನದಿಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಸಲಹೆ ಮಾಡಿದರು.

ಚಾಲಕರು ಮತ್ತು ನಿರ್ವಾಹಕರಿಗೆ ಶಿಸ್ತು ಅಂದರೆ ಏನು ಎಂಬುದು ತಿಳಿದಿರುತ್ತದೆ. ವಾಹನ ಹೋಗುತ್ತಿರುವಾಗ ಎಲ್ಲೆಂದರಲ್ಲಿ ವಾಹನ ನಿಲ್ಲಿಸಬಾರದು. ಬಸ್‌ನಲ್ಲಿ ಚಿಕ್ಕವರಿಂದ ಹಿಡಿದು ವಯೋವೃದ್ಧರವರೆಗೆ ಎಲ್ಲರೊಂದಿಗೂ ಸಾವಧಾನದಿಂದ ವರ್ತಿಸಬೇಕು. ಯಾರೊಂದಿಗೂ ಅಸಭ್ಯವಾಗಿ ವರ್ತಿಸಬಾರದು. ಏರುಧ್ವನಿಯಲ್ಲಿ ಮಾತನಾಡಬಾರದು. ನಮ್ಮ ವರ್ತನೆ ಇತರರಿಗೆ ಮಾದರಿಯಾಗುವ ಹಾಗೆ ಇರಬೇಕು ಎಂಬುದನ್ನು ಪ್ರತಿಯೊಬ್ಬ ಚಾಲಕರು ಮತ್ತು ನಿರ್ವಾಹಕರು ಅರಿಯಬೇಕು ಎಂದು ಸಲಹೆ ಮಾಡಿದರು.

ಅಪರ ಸಿವಿಲ್ ನ್ಯಾಯಾಧೀಶರಾದ ಅಶೋಕ ಆರ್. ಹೆಚ್. ಅವರು ಮಾತನಾಡಿ, ಸಾರಿಗೆ ಸಂಸ್ಥೆಯು 1948ರಲ್ಲಿ ಸ್ಥಾಪನೆಯಾಗಿದ್ದು, ಅಂದಿನಿಂದ ಇಲ್ಲಿಯವರೆಗ ಅಪಾರ ಸಾಧನೆ ಮಾಡುತ್ತಾ ಬಂದಿದೆ. ದೇಶದ ಬೆಳವಣಿಗೆಯಲ್ಲಿ ಸಾರಿಗೆ ಸಂಸ್ಥೆಯ ಪಾತ್ರವು ಅತ್ಯಂತ ಮಹತ್ವದ್ದಾಗಿದೆ. ಸಾರಿಗೆ ಸಂಸ್ಥೆಯ ಭಾಗವಾಗಿರುವ ನೀವುಗಳು ಯಾವಾಗಲು ಸಾರ್ವಜನಿಕರ ಹಿತಬಯಸುತ್ತ ಅದರಲ್ಲಿ ನೆಮ್ಮದಿ, ಸುಖ, ಶಾಂತಿ, ಸಾಧನೆ, ಸೇವಾ ಮನೋಭಾವದಿಂದ ಬಾಳಬೇಕು ಎಂದು ತಿಳಿಸಿದರು.

ನಮ್ಮ ದೇಶದಲ್ಲಿ ಅಪಘಾತಗಳ ಪ್ರಮಾಣವು ಹೆಚ್ಚುತ್ತಿದೆ. ಇದು ವಿಷಾಧದ ಸಂಗತಿಯಾಗಿದೆ. ಪ್ರತಿನಿತ್ಯ ಬಸ್ ಏರಿ ವಾಹನ ನಡೆಸುವ ಚಾಲಕರು ಮತ್ತು ನಿರ್ವಾಹಕರು ಕಾನೂನು ಜ್ಞಾನ ಪಡೆದುಕೊಳ್ಳಲೇಬೇಕು. ಹೊಸದಾಗಿ ರೂಪಿತವಾಗುವ ಕಾನೂನುಗಳ ಬಗ್ಗೆ ತಿಳಿದುಕೊಳ್ಳಬೇಕು. ಸಂಕಟದ ಪರಿಸ್ಥಿತಿಯಲ್ಲಿ ಕಾನೂನುಜ್ಞಾನವೇ ನಮಗೆ ದಾರಿದೀಪವಾಗಲಿದೆ ಎಂಬುದನ್ನು ಎಲ್ಲರೂ ಅರಿಯಬೇಕು ಎಂದರು. ಅಪಘಾತಗಳು ಸಂಭವಿಸಿದಾಗ ಗಾಯಗೊಂಡ ವ್ಯಕ್ತಿಗಳಿಗೆ ಮೊದಲನೇಯದಾಗಿ ಚಿಕಿತ್ಸೆ ಕೊಡಿಸುವ ಕಾರ್ಯ ಮಾಡಬೇಕು. ಆನಂತರ ಹತ್ತಿರದ ಪೊಲೀಸ್ ಠಾಣೆಗೆ ಕೂಡಲೇ ವಿಷಯ ತಿಳಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹೊಸಪೇಟೆ ತಾಲೂಕಿನ ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಹೇಮಲತಾ. ಬಿ. ಹುಲ್ಲೂರ, ಗೌರವಾನ್ವಿತ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಮೇಶ್ ಬಾಬು ಬಿ.ಎನ್., ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಪ್ರಶಾಂತ್ ನಾಗಲಾಪುರ್, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಶ್ರೀನಿವಾಸಮೂರ್ತಿ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಲಿಂ ಪಾಷ, ಕೆ.ಎಸ್.ಆರ್.ಟಿ.ಸಿ ವಿಭಾಗೀಯ ನಿಯಂತ್ರಣಾಧಿಕಾರಿಗಳಾದ ತಿಮ್ಮಾರೆಡ್ಡಿ ಹೀರಾ, ಆರ್‌ಟಿಓ ವಸಂತ ಚವ್ಹಾಣ್, ಪಟ್ಟಣ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಾದ ಲಕನ್ ಆರ್ ಮಸುಗುಪ್ಪಿ, ಅಭಿಯಂತರರಾದ ದಾಸರಿ ರಾಧಕೃಷ್ಣ, ರಾಜಶೇಖರ ವಾಜಂತ್ರಿ ಇವರು ಉಪಸ್ಥಿತರಿದ್ದರು.

## ಸಮಾಜ ಕಲ್ಯಾಣ ಇಲಾಖೆ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**
ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮ ಮತ್ತು ಪ್ರೋತ್ಸಾಹಧನ ಕಾರ್ಯಕ್ರಮಗಳಡಿ ಪ್ರಸಕ್ತ ಶೈಕ್ಷಣಿಕ ಸಾಲಿಗೆ ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರ ವಿದ್ಯಾರ್ಥಿ ವೇತನ ಹಾಗೂ ಪ್ರೋತ್ಸಾಹಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ www.sw.kar.nic.in ಲಿಂಕ್‌ನಲ್ಲಿ ಅರ್ಜಿ ಸಲ್ಲಿಸಬಹುದು

## ಪ್ರಬಂಧ ಬರೆದು ಬಹುಮಾನ ಗೆಲ್ಲಿ

**ಮೊದಲ ಪುಟದಿಂದ**
ಈ ನಾಲ್ಕು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತು ಸುಮಾರು 900 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಬೇಕು.

**ಪದವಿ ಪೂರ್ವ ಶಿಕ್ಷಣ ವಿಭಾಗದ ವಿಷಯ :–** 1) ಮಹಾತ್ಮ ಗಾಂಧೀಜಿ ಹಾಗೂ ಪ್ರಜಾಪ್ರಭುತ್ವ, 2) ದೇಶದ ಕಳಂಕವಾದ ಅಸ್ಪೃಶ್ಯತೆ ನಿವಾರಿಸುವಲ್ಲಿನ ಗಾಂಧೀಜಿಯವರ ಪ್ರಯೋಗಗಳು, 3) ಗಾಂಧೀಜಿಯವರನ್ನು ಜಗತ್ತು ಗ್ರಹಿಸಿದ ರೀತಿ, 4) ನನ್ನ ಬದುಕಿನಲ್ಲಿ ಗಾಂಧೀಜಿ ತತ್ವಗಳನ್ನು ಅಳವಡಿಸಿಕೊಳ್ಳುವ ಬಗೆ, ಪದವಿ ಪೂರ್ವ ಶಿಕ್ಷಣ ವಿಭಾಗದ ವಿದ್ಯಾರ್ಥಿಗಳು ಈ ನಾಲ್ಕು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತು ಸುಮಾರು 1500 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಬೇಕು.

**ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗದ ವಿಷಯ :–** 1) ಇಂದಿನ ಪ್ರಜಾಪ್ರಭುತ್ವದಲ್ಲಿ ಸತ್ಯಾಗ್ರಹದ ಮಹತ್ವ, 2) ದೇಶ ನಿರ್ಮಾಣದಲ್ಲಿ ಗಾಂಧೀಜಿಯವರ ಜಾತ್ಯಾತೀತ ನಿಲುವುಗಳು, 3) ಗಾಂಧೀಜಿಯವರ ಧಾರ್ಮಿಕ ಸಹಿಷ್ಣುತೆ ಚಿಂತನೆ, ಸ್ವಾತಂತ್ರ್ಯ ಮತ್ತು ಸಮಾನತೆಯ ಪರಿಕಲ್ಪನೆಗಳು, 4) ಗಾಂಧೀಜಿಯವರ ವಿಚಾರದಲ್ಲಿ ಸತ್ಯದ ಪರಿಕಲ್ಪನೆ, 5) ಗಾಂಧೀಜಿಯವರು ಕಂಡ ಸ್ವರಾಜ್ಯ ಮತ್ತು ಆರ್ಥಿಕ ಚಿಂತನೆಗಳು. ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗದ ವಿದ್ಯಾರ್ಥಿಗಳು ಈ ಐದು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತು ಸುಮಾರು 2000 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಬೇಕು ಎಂದು ವಾರ್ತಾ ಇಲಾಖೆಯ ಪ್ರಕಟಣೆ ತಿಳಿಸಿದೆ.

Contact For News, Advt & Event Coverage
94486 33038 / 94825 99089

## ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**
ಜಿಲ್ಲೆಯ ಕ್ರೀಡಾ ಪೋಷಕರನ್ನು ಗುರುತಿಸಿ ಅವರಿಗೆ ಗೌರವಿಸಲು 2024–25ನೇ ಸಾಲಿನ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಯನ್ನು ನೀಡಲಾಗುತ್ತಿದ್ದು, ಈ ಪ್ರಶಸ್ತಿಗಾಗಿ ಅರ್ಹ ಕ್ರೀಡಾ ಪೋಷಕರಿಂದ ಅರ್ಜಿ ಆಹ್ವಾನಿಸಲಾಗಿದೆ.
ಅರ್ಜಿ ಸಲ್ಲಿಸಲು ಬಯಸುವ ಅರ್ಹ ಕ್ರೀಡಾ ಪೋಷಕರು ಅರ್ಜಿ ನಮೂನೆಗಳನ್ನು ಹಾಗೂ ಮಾರ್ಗಸೂಚಿಗಳನ್ನು ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕೊಪ್ಪಳ ಇವರಲ್ಲಿ ಪಡೆದು ಭರ್ತಿ ಮಾಡಿ ಸೆಪ್ಟೆಂಬರ್ 09 ರೊಳಗಾಗಿ ಈ ಕಚೇರಿಗೆ ಸಲ್ಲಿಸಬೇಕು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕ್ರೀಡಾಪಟುಗಳಿಂದ ಏಕಲವ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಕ್ರೀಡೆಯಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿರುವ ಜಿಲ್ಲೆಯ ಕ್ರೀಡಾಪಟುಗಳಿಗೆ 2023ನೇ ಸಾಲಿನ ಏಕಲವ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದ್ದು, ಕ್ರೀಡಾ ಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿರುವ ಜಿಲ್ಲೆಯ ಪ್ರತಿಭಾನ್ವಿತ ಕ್ರೀಡಾಪಟುಗಳಿಂದ ಏಕಲವ್ಯ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಅರ್ಹ ಕ್ರೀಡಾಪಟುಗಳು ನಿಗದಿತ ಅರ್ಜಿ ನಮೂನೆಗಳನ್ನು ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ ಇವರಲ್ಲಿ ಪಡೆದು ಭರ್ತಿ ಮಾಡಿ, ಸೆಪ್ಟೆಂಬರ್ 10 ರೊಳಗೆ ಈ ಕಚೇರಿಗೆ ಸಲ್ಲಿಸಬೇಕು ಎಂದು ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗ್ರಾಪಂ ಆಡಳಿದಲ್ಲಿ ಹಸ್ತಕ್ಷೇಪ ನಿಲ್ಲಿಸಿ

**ಮೊದಲ ಪುಟದಿಂದ**
ಯೋಜನೆಗಳನ್ನು ರಾಜ್ಯ ಮಟ್ಟದಲ್ಲಿ ನಿರ್ಧರಿಸಿ ಗ್ರಾ.ಪಂಚಾಯಿತಿ ಅನುದಾನದಲ್ಲಿ ಕೆಲಸ ನಿರ್ವಹಿಸಲು ಒತ್ತಡ ಹೇರುತ್ತಿದೆ. ತಾ.ಪಂ. ಜಿ.ಪಂ. ಚುನಾವಣೆಗಳನ್ನು ಮಾಡದೆ ಶಾಸಕರು ಮತ್ತು ಸಚಿವರು ತಾ.ಪಂ. ಮತ್ತು ಜಿ.ಪಂ ಅನುದಾನವನ್ನ ಮನಬಂದಂತೆ ಬಳಸುತ್ತಿದ್ದಾರೆ. ಇದರಿಂದ ಗ್ರಾಮೀಣ ಸಮಸ್ಯೆಗಳು ದಿನದಿನಕ್ಕೂ ಉಲ್ಬಣಗೊಳ್ಳುತ್ತಿವೆ. ಗಾಂಧೀಜಿ ಕನಸನ್ನ ಸರ್ಕಾರ ನನಸಾಗಿಸಬೇಕು ಎಂದು ಆಗ್ರಹಿಸಿದರು.

ಒಕ್ಕೂಟದ ಜಂಬಣ್ಣ, ಮುರಳಿರಾಜ್, ಮಮತಾ ತಳವಾರ್, ಗಡ್ಡಿನಾಗರಾಜ್, ಗೋವಿಂದನಾಯ್ಕ್, ದೂಪದಹಳ್ಳಿ ಮಂಜುನಾಥ, ರಮೇಶ್ ಗದ್ದಿಕೇರಿ, ಸುರೇಶ್, ಹನುಮಂತಪ್ಪ, ಬಾಬು, ಶ್ರೀಧರ್, ರವಿಕುಮಾರ್, ರೇವಣ ಸಿದ್ದೇಶ್ವರ, ಶಶಿಕಲಾ, ವೆಂಕಟೇಶ್, ಸುರೇಶ್, ತಿಪ್ಪೇಸ್ವಾಮಿ, ಕರಿಯಪ್ಪ, ಕೋಟೆಪ್ಪ, ಚನ್ನಬಸಪ್ಪ, ಸುಧಾಜೋಗತಿ, ಮಂಜುನಾಥ, ಹುಲುಗಪ್ಪ, ಮತ್ತು ಇನ್ನು ಹಲವಾರು ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಸರ್ವ ಸದಸ್ಯರು ಜಿಲ್ಲಾಧಿಕಾರಿ ಮೂಲಕ ಸಿಎಂಗೆ ಮನವಿ ಸಲ್ಲಿಸಿದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

HAMPI TIMES VIJAYANAGARA

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

### ವಿಷಯ : ಕನ್ನಡ(ಪ್ರ.ಭಾ) ಪದ್ಯ–ಕೌರವೇಂದ್ರನ ಕೊಂದೆ ನೀನು (ಮುಂದುವರೆದ ಭಾಗ)

**ಈ) ಕೊಟ್ಟಿರುವ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ.**

**1.ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು ? ಅಥವಾ ಪಾಂಡವರನ್ನು ರಕ್ಷಿಸಲು ನಿರ್ಧರಿಸಿದ ಕೃಷ್ಣನು ಕರ್ಣನಿಗೆ ಒಡ್ಡಿದ ಆಮಿಷಗಳನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ? (ಮಾರ್ಚ್–2018, ಜೂನ್–2019 , ಜೂನ್–2022 , ಆಗಸ್ಟ್–2024)**

ಉತ್ತರ:– "ಕರ್ಣ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನಿನ್ನಾಣೆ ನೀನು ನಿಜವಾಗಿ ಭೂಮಿಯ ಒಡೆಯ . ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ." ಎಂದು ಹೇಳುತ್ತಾ ಕೃಷ್ಣನು ಕರ್ಣನ ಕಿವಿಯಲ್ಲಿ ದ್ವಂದ್ವವನ್ನು ಬಿತ್ತಿದನು. ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು. ನಿನ್ನಯ ನಂತರ ಧರ್ಮರಾಯ, ಕಲಿಭೀಮ, ಅರ್ಜುನರು ಜನಿಸಿದರು. ಐದನೆಯ ಮಂತ್ರದಲ್ಲಿ ಮಾದ್ರಿಯಲಿ ನಕುಲ ಸಹದೇವರು ಹುಟ್ಟಿದರು. ನಿನ್ನನ್ನು ಹಸ್ತಿನಾಪುರದ ರಾಜ್ಯದ ರಾಜನನ್ನಾಗಿ ಮಾಡುವೆನು. ಪಾಂಡವ ಕೌರವ ರಾಜರು ನಿನ್ನನ್ನು ಓಲೈಸುವರು. ನಿನಗೆ ಎರಡು ವಂಶವು ಮರು ಮಾತನಾಡದೆ ಸೇವೆಯನ್ನು ಮಾಡುವರು. ಏನಕ್ಕೆ ನೀನು ದುರ್ಯೋಧನ ಬಾ ಯೆಂಜಲಿಗೆ ಕೈಯಿಡುವುದೇ? ಎಡ ಭಾಗದಲ್ಲಿ ಕೌರವೇಂದ್ರರ ಸಮೂಹ ಹಾಗೂ ಬಲ ಭಾಗದಲ್ಲಿ ಪಾಂಡು ಮಕ್ಕಳ ಸಮೂಹ, ಮುಂದುಗಡೆ ಮಾದ, ಮಾಗದ, ಯಾದವಾದಿಗಳು ಮಧ್ಯದಲ್ಲಿ ನೀನು ರಾಜಸಭೆಯಲ್ಲಿ ಪ್ರಕಾಶಿಸುವ ವಿಶೇಷ ಸೊಬಗವನ್ನು ತೊರೆಯುವುದು ಸರಿಯೇ ? ದುರ್ಯೋಧನನ್ನು ನುಡಿಸಲು' ಒಡೆಯ ಅನುಗ್ರಹವಾಗಲಿ' ಎಂಬುದು ನಿನಗೆ ಕಷ್ಟವಾಗುವುದಿಲ್ಲವೇ ? ಎಂದು ಆಮಿಷ ಒಡ್ಡಿದನು

**2. ಪಾಂಡವರು ಸೋದರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ? ಅಥವಾ ತನ್ನ ಜನ್ಮ ರಹಸ್ಯ ತಿಳಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು ? ಅಥವಾ ಪಾಂಡವರು ತನ್ನ ಸೋದರಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ಕವಿ ಕುಮಾರವ್ಯಾಸ ಹೇಗೆ ಚಿತ್ರಿಸಿದ್ದಾನೆ ?(ಮಾರ್ಚ್ –2018 , ಜೂನ್–2019, ಜೂನ್–2022 , ಆಗಸ್ಟ್–2024)**

ಉತ್ತರ:– ಶ್ರೀ ಕೃಷ್ಣನು ಕರ್ಣನಿಗೆ ಆಮಿಷ ಗಳನ್ನು ಒಡ್ಡಿದಾಗ ಕರ್ಣನು ದುಃಖ ಕೊಂಡು ಮನದೊಳಗೆ" ಅಯ್ಯೋ ದುರ್ಯೋಧನನಿಗೆ ಕೇಡಾದದು, ಹರಿಯ ಹಗೆತನವು ಹೊಗೆ ತೋರದೆ ಸುಟ್ಟು ಹಾಕುವುದಲ್ಲದೆ ಸುಮ್ಮನೆ ಹೋಗುವುದೆ' ಎಂದುಕೊಂಡನು." ನಾನು ರಾಜ್ಯದ ಸಿರಿ ಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನ್ನು ಕೊಂದೆ. ವೀರ ದುರ್ಯೋಧನನೇ ಒಡೆಯನು, ಆತನ ಹಗೆಯೇ ಹಗೆ. ಅಭಿಮಾನವೇ ಅಭಿಮಾನವು, ದುರ್ಯೋಧನನ ಹಾದಿಯನ್ನೇ ಅನುಸರಿಸುತ್ತೇನೆ."ಎಂದನು. ಕೃಷ್ಣ ಕೇಳು 'ನಾಳೆ ಸಮರದ ವಿಷಯದಲ್ಲಿ ಪಾಂಡವರಲ್ಲಿ ನಿಜ ಪರಾಕ್ರಮದ ಶ್ರೇಷ್ಠತನವನ್ನು ತೋರುವೆನು. ನಾಳಿನ ಕೌರವ ಮತ್ತು ಪಾಂಡವರ ಚತುರಂಗಬಲದ ನಡುವಿನ ಯುದ್ಧವು ಮೃತ್ಯು ದೇವತೆಗೆ ಭೋಜನಕೂಟವಾಗುವುದು. ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ ಯುದ್ಧ ರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರ ಯೋಧರ ಕೊಂದು, ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು. ಸೂರ್ಯನ ದೇವನ ಮೇಲಾಣೆ ನಿನ್ನ ವೀರರಾದ ಪಾಂಡವರನ್ನು ನೋಯಿಸೆನು"ಎಂದನು.

**ಉ) ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

**1." ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು"(ಮಾರ್ಚ್–2020)**

ಆಯ್ಕೆ:– ಈ ಮೇಲಿನ ವಾಕ್ಯವನ್ನು ಕುಮಾರವ್ಯಾಸ ಬರೆದಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಕೃತಿಯಿಂದ ಆಯ್ದ' ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ.
ಸಂದರ್ಭ:– ಸಂಧಿ ವಿಫಲವಾಗಿ ಯುದ್ಧ ಎಂದ ತೀರ್ಮಾನವಾದಾಗ ಕೃಷ್ಣನು ದುರ್ಯೋಧನ ಶಕ್ತಿಯಾಗಿದ್ದ ಕರ್ಣನ ಬಲವನ್ನು ಕುಗ್ಗಿಸಲು ಕರ್ಣನನ್ನು ತನ್ನೊಡನೆ ಕರೆತಂದು ಜನ್ಮ ರಹಸ್ಯನ್ನು ತಿಳಿಸುತ್ತಾ, ಕುಂತಿ ಪಡೆದ ಮಕ್ಕಳಲ್ಲಿ ನೀನೆ ಮೊದಲಿಗ, ನಂತರ ಯುಧಿಷ್ಟರ ದೇವ, ಕಲಭೀಮ, ಅರ್ಜುನರು ಜನಿಸುತ್ತಾರೆ ಎಂದು ಹೇಳುವಾಗ ನಕುಲ ಸಹದೇವರು ಮಾದ್ರಿಯಲ್ಲಿ ಜನಿಸಿದರು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.
ಸ್ವಾರಸ್ಯ:– ಕೃಷ್ಣನ ಭೇದ ತಂತ್ರ ಶತ್ರುವಿನೊಂದಿಗೆ ಯುದ್ಧಕ್ಕೆ ತಿಳಿದು ಕಾದಾಡುವ ಮುನ್ನ ಶತ್ರುಬಲವನ್ನು ಕುಗ್ಗಿಸುವ ರಾಜ ತಂತ್ರ, ಪಾಂಡವರಿಗೆ ಅಪಾಯವಾಗದಂತೆ ಕರ್ಣನಿಂದ ಪಾಂಡವರನ್ನು ರಕ್ಷಿಸಬೇಕೆಂಬ ನಿರ್ಧಾರ, ಜನ್ಮ ರಹಸ್ಯ ತಿಳಿಸಿ ಕರ್ಣನನ್ನು ಭಾವನಾತ್ಮಕವಾಗಿ ಕುಗ್ಗಿಸುವ ಪ್ರಯತ್ನ ಕವಿ ಸ್ವಾರಸ್ಯಪೂರ್ಣವಾಗಿ ತಿಳಿಸಿದ್ದಾನೆ.

**2."ನಿನ್ನಯ ವೀರರೈವರನೋಯಿಸೆನು ರಾಜೀವ ಸಖನಾಣೆ" (ಸೆಪ್ಟಂಬರ್2020)**

ಆಯ್ಕೆ:– ಈ ಮೇಲಿನ ವಾಕ್ಯವನ್ನು ಕುಮಾರವ್ಯಾಸ ಬರೆದಿರುವ' ಕರ್ಣಾಟ ಭಾರತ ಕಥಾಮಂಜರಿ' ನಮ್ಮ ಕೃತಿಯಿಂದ ಆಯ್ದ' ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯದಿಂದ ಆರಿಸಲಾಗಿದೆ
ಸಂದರ್ಭ:– ಶ್ರೀ ಕೃಷ್ಣನು ಪಾಂಡವರು ಕೌರವರ ನಡುವೆ ಸಂಧಿ ಮಾಡಲು ಹೋಗಿ ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ತನ್ನ ಪಕ್ಕದಲ್ಲಿಯೇ ತೊಡೆ ತಾಗುವಂತೆ ರಥದಲ್ಲಿ ಕೂರಿಸಿಕೊಂಡು ಆತನಿಗೆ ಜನ್ಮ ರಹಸ್ಯವನ್ನು ತಿಳಿಸಿ, ಅನೇಕ ಆಮಿಷಗಳನ್ನು ಒಡ್ಡಿದ ಸಂದರ್ಭದಲ್ಲಿ ಕರ್ಣನು ಶ್ರೀ ಕೃಷ್ಣನಿಗೆ ಈ ಮಾತನ್ನು ಹೇಳುತ್ತಾನೆ.
ಸ್ವಾರಸ್ಯ:– ಅಸಾಮಾನ್ಯನು, ವೀರತನಕ್ಕೆ, ದಾನಕ್ಕೆ, ಕರುಣೆಗೆ, ಶೂರತನಕ್ಕೆ ಹೆಸರಾಗಿದ್ದ ಕರ್ಣನಿಗೆ ಆತನ ಜನ್ಮರಹಸ್ಯ ಎಂತಹ ಸಂಕಟವನ್ನು ಉಂಟು ಮಾಡಿತು. ಸ್ವಾಮಿ ನಿಷ್ಠೆಯ ಮುಂದೆ ಶ್ರೀಕೃಷ್ಣ ಒಡ್ಡಿದ ಪ್ರಲೋಭನೆ ಹೇಗೆ ವ್ಯರ್ಥವಾಯಿತು ಹಾಗೂ ಅಸಹಾಯಕನಾದ ಸ್ಥಿತಿಯಲ್ಲಿ ನೋವು ಸಂಕಟದಿಂದ ಬಳಲುವ ಕರ್ಣನ ವ್ಯಕ್ತಿತ್ವದ ಹಿರಿಮೆ ಇಲ್ಲಿ ಸ್ವಾರಸ್ಯ ಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**3." ಮಾರಿ ಗೌತಣವಾಯ್ತು ನಾಳಿನ ಭಾರತವು**

ಆಯ್ಕೆ:– ಈ ವಾಕ್ಯವನ್ನು ಕುಮಾರವ್ಯಾಸ ಬರೆದಿರುವ'ಕರ್ಣಾಟ ಭಾರತ ಕಥಾ ಮಂಜರಿ' ಎಂಬ ಮಹಾ ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.
ಸಂದರ್ಭ:– ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.
ಸ್ವಾರಸ್ಯ:– ಕರ್ಣನು ಮುಂದೆ ನಡೆಯುವ ಮಹಾಭಾರತ ಕುರುಕ್ಷೇತ್ರದ ಯುದ್ಧದ ಭೀಕರತೆಯನ್ನು, ಕೇಡಿನ ಉದ್ಗಾರವನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು.ಕೆ. ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ. ಕೂಡ್ಲಿಗಿ(ತಾ) ವಿಜಯನಗರ(ಜಿ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055